# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY






ಸಂಪುಟ:01 • ಸಂಚಿಕೆ:199 • ನೋಂದಣಿ ನಂ.:KARKAN27911 • ವಿಜಯನಗರ • 02.01.2024 • ಮಂಗಳವಾರ • ಪುಟ:04 • ಬೆಲೆ:2

Volume:01 • Issue:199 • Reg.No:KARKAN27911 • VIJAYANAGARA • 02.01.2024 • Tuesday • Page:04 • Rs:2


**ಮೈಕ್ರೋ ನ್ಯೂಸ್**

## ಕೊಪ್ಪಳ ಜಿಲ್ಲೆಯಲ್ಲಿ ಮುಖ್ಯಮಂತ್ರಿಗಳ ಪ್ರವಾಸ ಇಂದು

**ಹಂಪಿ ಟೈಮ್ಸ್ ಕೊಪ್ಪಳ**

ವಿಜಯಪುರ ಜಿಲ್ಲೆಯ ಪ್ರವಾಸದಲ್ಲಿರುವ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ ಅವರು ಜನವರಿ 2ರಂದು ಕೊಪ್ಪಳ ಜಿಲ್ಲೆಯ



ಗಿಣಿಗೇರಾ ಏರ್‌ಸ್ಟ್ರಿಪ್‌ಗೆ ಭೇಟಿ ನೀಡುವರು.

ಅಂದು ಬೆಳಗ್ಗೆ 10 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದ ಮೂಲಕ ಹೊರಟು ಬೆಳಗ್ಗೆ 10.50ಕ್ಕೆ ಕೊಪ್ಪಳ ಜಿಲ್ಲೆಯ ಗಿಣಿಗೇರಾ ಏರ್‌ಸ್ಟ್ರಿಪ್‌ಗೆ ಆಗಮಿಸುವರು. ಅಲ್ಲಿಂದ 11 ಗಂಟೆಗೆ ನಿರ್ಗಮಿಸಿ ವಿಜಯಪುರ ಜಿಲ್ಲೆಯತ್ತ ಪ್ರಯಾಣ ಬೆಳೆಸುವರು.

ವಿಜಯಪುರ ಜಿಲ್ಲೆಯ ಕಾರ್ಯಕ್ರಮದ ಬಳಿಕ ಮುಖ್ಯಮಂತ್ರಿಗಳು ಸಂಜೆ 4.40ಕ್ಕೆ ಗಿಣಿಗೇರಾ ಏರ್‌ಸ್ಟ್ರಿಪ್‌ಗೆ ಆಗಮಿಸಿ ಅಲ್ಲಿಂದ ಕೇಂದ್ರ ಸ್ಥಾನ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ಕೆ.ಚಿರಂಜೀವಿ ತಿಳಿಸಿದ್ದಾರೆ.






**ಒಳ ಪುಟಗಳಲ್ಲಿ**


**ತಂದೆಗೆ ತಾಯಿಯಾದ ಮಗಳು** – ನಂದಿನಿ ಸನಬಾಲ್, ಪುಟ 2ರಲ್ಲಿ ಓದಿ

**ಹೊಸ ವರ್ಷಕ್ಕೆ ನವ ಸಂಕಲ್ಪಗಳು** – ವೀಣಾ ಹೇಮಂತಗೌಡ ಪಾಟೀಲ್, ಪುಟ 2ರಲ್ಲಿ ಓದಿ

**ಶಿಕ್ಷಣ ಇಲ್ಲದೆ ಸಾಧನೆ ಅಸಾಧ್ಯ** – ಡಿಸಿ ಡಾ.ಕೆ.ಆರ್ ದುರುಗೇಶ ಪುಟ 3ರಲ್ಲಿ ಓದಿ

**ಹುಂಡಿಯಲ್ಲಿ 63.49 ಲಕ್ಷ ರೂ. ಸಂಗ್ರಹ** – ಪುಟ 3ರಲ್ಲಿ ಓದಿ

**ಇಂದು ಕೊಪ್ಪಳ ವಿವಿ ವಾಣಿಜ್ಯ ವಿಭಾಗದಲ್ಲಿ ಕೌನ್ಸೆಲಿಂಗ್** – ಪುಟ 3ರಲ್ಲಿ ಓದಿ

**ರಾಜ್ಯ ಮಟ್ಟದ ಕೈಮಗ್ಗ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಜ.02ರಿಂದ** – ಪುಟ 2ರಲ್ಲಿ ಓದಿ

**ಸಂಭಾವ್ಯ ಸಾಲ ಯೋಜನೆ 2024-25ರ ಪಟ್ಟಿ ಬಿಡುಗಡೆ** – ಪುಟ 3ರಲ್ಲಿ ಓದಿ


# ಹಂಪಿ ಅಂಗಳದಲ್ಲಿ ಸೂರ್ಯಾಸ್ತೋದಯ




**ಹಂಪಿ ಟೈಮ್ಸ್ ಹೊಸಪೇಟೆ:**

ಹೊಸ ಕ್ಯಾಲೆಂಡರ್ ವರ್ಷ ಸ್ವಾಗತಿಸುವ ಹುಮ್ಮಸ್ಸಿನಲ್ಲಿದ್ದ ಅನೇಕರು 2023ರ ಸೂರ್ಯಾಸ್ತವನ್ನು ಒಮ್ಮೆ ಕಣ್ತುಂಬಿಕೊಳ್ಳಬೇಕೆಂಬ ಕಾತುರದಿಂದ ಹಂಪಿಯ ನಾನಾ ಭಾಗಗಳಲ್ಲಿ ಜಮಾಯಿಸಿದ್ದರು. ಸ್ನೇಹಿತರು, ಸಂಬಂಧಿಕರು, ಪ್ರೇಮಿಗಳೊಂದಿಗ ಆಗಮಿಸಿದ್ದರು. 2023ರ ಕೊನೆ ದಿನದ ಸೂರ್ಯನನ್ನು ತಮ್ಮ ಕಣ್ಣು ಹಾಗೂ ಕ್ಯಾಮರಗಳಲ್ಲಿ ಸೆರೆ ಹಿಡಿದು 2023ಕ್ಕೆ ಗುಡ್‌ಬೈ ಹೇಳಿದರು. ನಗರದ ನಾನಾ ಕಡೆಗಳಲ್ಲಿ, ಮನೆಗಳಲ್ಲಿ ಗಡಿಯಾರದ ಮುಳ್ಳು ರಾತ್ರಿ 12 ಗಂಟೆಗೆ ಬರುವವರೆಗೆ ಕಾದು ಕುಳಿತು. 12 ಗಂಟೆಗೆ ಕೇಕು ಕತ್ತರಿಸಿ ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು. 2024ರ ಮೊದಲ ದಿನ ಬೆಳಿಗ್ಗೆ ಸೂರ್ಯೋದಯ ವೀಕ್ಷಿಸಿ ತಮ್ಮ ದೈನಂದಿನ ಕಾರ್ಯಗಳಲ್ಲಿ ತೊಡಗಿದರು.

ಖ್ಯಾತ ಛಾಯಗ್ರಾಹಕ ಶಿವಶಂಕರ ಬಣಗಾರ ಅವರು ಹಂಪಿಯ ಹೇಮಕೂಟದಲ್ಲಿ 2023ರ ಕೊನೆ ದಿನ ಸೂರ್ಯಾಸ್ತ ಮತ್ತು 2024ರ ಮೊದಲ ದಿನ ಕಮಲಾಪುರದ ಕೆರೆ ದಡದಲ್ಲಿ ಸೋರ್ಯೋದಯದ ನಿಸರ್ಗದ ಸೊಬಗನ್ನು ತಮ್ಮ ವಿಶೇಷ ಕ್ಯಾಮರದ ಕಣ್ಣುಗಳಲ್ಲಿ ಸೆರೆಹಿಡಿದ ದೃಶ್ಯಗಳಿವು.

# ಹಂಪಿ ಉತ್ಸವ ಫೆ.2,3 - 4, ಸಕಲ ಸಿದ್ಧತೆ ಕೈಗೊಳ್ಳಿ

### ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಸೂಚನೆ | ವಿವಿಧ ಸಮಿತಿಗಳ ಪ್ರಗತಿ ಪರಿಶೀಲನೆ ಸಭೆ | ವಿವಿಧ ಇಲಾಖೆಗೆ ಹೆಗಲೇರಿದ ಜವಾಬ್ದಾರಿ

**ಹಂಪಿ ಟೈಮ್ಸ್ ಹೊಸಪೇಟೆ**

ಐತಿಹಾಸಿಕ ವಿಜಯನಗರ ಸಾಮ್ರಾಜ್ಯದ ಗತ ವೈಭವ ಸಾರುವ ಹಂಪಿ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಎಲ್ಲಾ ಸಮಿತಿಗಳು ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಹಂಪಿ ಉತ್ಸವ ಆಚರಣೆ ಕಾರ್ಯಕಾರಣಿ ಸಮಿತಿ ಅಧ್ಯಕ್ಷರಾದ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ಹಂಪಿ ಉತ್ಸವ ಕುರಿತು ಸೋಮವಾರ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ವಿವಿಧ ಸಮಿತಿಗಳ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈ ಬಾರಿಯ ಹಂಪಿ ಉತ್ಸವವನ್ನು ಫೆಬ್ರವರಿ 2, 3 ಮತ್ತು 4 ರಂದು ಆಚರಿಸಲು ದಿನಾಂಕ ನಿಗದಿಪಡಿಸಲಾಗಿದೆ. ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಲು ಈಗಾಗಲೇ ಸ್ವಾಗತ ಮತ್ತು ಶಿಷ್ಟಾಚಾರ ಸಮಿತಿ, ಸಾರಿಗೆ ಸಮಿತಿ, ವಸತಿ ಸಮಿತಿ, ಆಹಾರ ಸಮಿತಿ, ಮಾಧ್ಯಮ ಸಮಿತಿ, ಮೂಲಭೂತ ಸೌಲಭ್ಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಸಮಿತಿ, ಆರೋಗ್ಯ ಮತ್ತು ನೈರ್ಮಲೀಕರಣ, ವಸ್ತು ಪ್ರದರ್ಶನ ಸಮಿತಿ, ವೇದಿಕೆ ಸಮಿತಿ, ಕ್ರೀಡಾ ಸೇರಿದಂತೆ ಸುಮಾರು 20ಕ್ಕೂ ಅಧಿಕ ಸಮಿತಿಗಳನ್ನು ರಚಿಸಿ ಕಾರ್ಯ ಹಂಚಿಕೆ ಮಾಡಲಾಗಿದ್ದು, ಕಾರ್ಯಕ್ರಮದ



ವ್ಯವಸ್ಥಿತ ನಿರ್ವಹಣೆಯಾಗಬೇಕು. ಈ ಹಿನ್ನೆಲೆಯಲ್ಲಿ ಎಲ್ಲಾ ಸಮಿತಿಗಳು ಪರಸ್ಪರ ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದರು.

ಉತ್ಸವದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ, ಕಬಡ್ಡಿ, ಕುಸ್ತಿ, ಸಹಾಸ ಕ್ರೀಡೆಮುಂತಾದ ಕ್ರೀಡಾಕೂಟಗಳು, ರಂಗೋಲಿ ಸ್ಪರ್ಧೆ, ವಿಜೃಂಭಣೆಯ ಸಾಂಸ್ಕೃತಿಕ ಕಲಾತಂಡಗಳ ಮೆರವಣಿಗೆ, ವಸ್ತುಪ್ರದರ್ಶನ ಸೇರಿದಂತೆ ಹತ್ತು ಹಲವು ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜನೆಗೆ ಸಂಬಂಧಿಸಿದ ಅಧಿಕಾರಿಗಳು ತ್ವರಿತವಾಗಿ ಕ್ರಮ ಕೈಗೊಳ್ಳಬೇಕು. ಸ್ಥಳೀಯ ಕಲಾತಂಡಗಳಿಗೆ ಆದ್ಯತೆ ನೀಡಬೇಕಾಗಿದ್ದು, ಜಿಲ್ಲೆಯಲ್ಲಿರುವ ಹಗಲುವೇಷ, ಬುಡಕಟ್ಟು ಸಮುದಾಯದ ಕಲೆ, ವೀರಗಾಸೆ, ಮಹಿಳಾ ಡೊಳ್ಳು ಕುಣಿತಾ, ಕೋಲಾಟ, ಲಂಬಾಣಿ, ಹಲಗೆ ವಾದನ, ಯಕ್ಷಗಾನ ಸೇರಿದಂತೆ ವಿವಿಧ ಸ್ಥಳೀಯ ಕಲಾಪ್ರಕಾರಗಳನ್ನು ಗುರಿತಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕ್ರಮವಹಿಸಬೇಕು. ಕಾರ್ಯಕ್ರಮಕ್ಕೆ ಆಗಮಿಸುವ ಶಾಲಾ ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ಕುಡಿಯುವ ನೀರು, ಉಪಹಾರದ ವ್ಯವಸ್ಥೆಗೆ ಆಹಾರ ಇಲಾಖೆಯು ಕ್ರಮ ಕೈಗೊಳ್ಳಬೇಕು. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಾರ್ವಜನಿಕರಿಗೆ ಅನುಕೂಲವಾಗಲು ಜಿಲ್ಲೆಯ ಎಲ್ಲ ತಾಲೂಕು ಕೇಂದ್ರಗಳಿಂದ ಹಾಗೂ ಸುತ್ತಮುತ್ತಲ ಗ್ರಾಮಗಳಿಂದ ಹಂಪಿಗೆ ವಿಶೇಷ ಬಸ್ ವ್ಯವಸ್ಥೆ ಕೈಗೊಳ್ಳಬೇಕು ಎಂದು ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹಂಪಿ ಉತ್ಸವದ ಅಂಗವಾಗಿ ಶಾಲಾ ಮಕ್ಕಳ ನೃತ್ಯ, ಚಿತ್ರಕಲಾ, ಪ್ರಬಂಧ ಸ್ಪರ್ಧೆಗಳು, ಮೇಳಗಳು ಹಾಗೂ ಇತರೆ ಕಾರ್ಯಕ್ರಮಗಳ ಆಯೋಜನೆ ಕುರಿತಂತೆ ಜಿಲ್ಲಾಡಳಿತಕ್ಕೆ ಮಾಹಿತಿ ನೀಡಿ, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಹಂಪಿ ಉತ್ಸವವನ್ನು ವ್ಯವಸ್ಥಿತವಾಗಿ ಹಾಗೂ ಯಶಸ್ವಿಯಾಗಿ ಆಚರಿಸಲು ಎಲ್ಲಾ ಅಧಿಕಾರಿಗಳು ಶ್ರಮಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸದಾಶಿವ ಪ್ರಭು ಬಿ., ಅಪರ ಜಿಲ್ಲಾಧಿಕಾರಿ ಅನುರಾಧ ಜಿ.ಸೇರಿದಂತೆ ವಿವಿಧ ಸಮಿತಿಗಳ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ಉಪಸ್ಥಿತರಿದ್ದರು.

# ಶಿಕ್ಷಕಿ ಏಟಿಗೆ ವಿದ್ಯಾರ್ಥಿನಿಗೆ ಬಾಸುಂಡೆ ವರ್ಷದ ಮೊದಲ ದಿನವೆ ಕಣ್ಣೀರಿಟ್ಟ ಮಗು

**ಹಂಪಿ ಟೈಮ್ಸ್ ಹೊಸಪೇಟೆ**

ಮಕ್ಕಳಿಗೆ ಹೊಸ ವರ್ಷದ ದಿನ ಮಕ್ಕಳ ಮುಖದಲ್ಲಿ ನಗು ತರಿಸಬೇಕಾಗಿದ್ದ ಶಿಕ್ಷಕಿ ವಿದ್ಯಾರ್ಥಿನಿಗೆ ಬಾಸುಂಡೆ ಬರುವಂತೆ ಮನಸೋಯಿಚ್ಚೆ ಬಾರಿಸಿದ ಘಟನೆ ಹೊಸ ವರ್ಷದ ಮೊದಲ ದಿನ ಸೋಮವಾರ ನಡೆದಿದೆ.

ತಾಲೂಕಿನ ನಾಗೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಾಲ್ಕನೆ ತರಗತಿ ಓದುತ್ತಿರುವ ಪ್ರಣೀತಗೆ ದೈಹಿಕ ಶಿಕ್ಷಕಿ ಬಾಸುಂಡ ಬರುವಂತೆ ಬಾರಿಸಿದ್ದಾರೆ. ಕೆಂಪೇರಿದ ಬಾಸುಂಡಿಯ ಉರಿ ತಾಳಲಾರದೆ ಮಗು ಅಳುತ್ತಲೆ ಮನೆಗೆ ಮರಳಿದೆ. ಮಕ್ಕಳ ಮೈಮೇಲಿನ ಬಾಸುಂಡೆ ಕಂಡ ಪೋಷಕರು ಶಾಲೆಗೆ ಬಂದು ವಿಚಾರಿಸಿದಾಗ ದೈಹಿಕ ಶಿಕ್ಷಕಿಯ ಮಾತುಗಳು ಪೋಷಕರನ್ನು ಮತ್ತಷ್ಟು ಆಕ್ರೋಶಕ್ಕೀಡು ಮಾಡಿದೆ. ಶಾಲೆಯ ಮುಖ್ಯೋಪಾಧ್ಯಾಯರ ಗಮನಕ್ಕೆ ತಂದ ಪೋಷಕರು ಶಿಕ್ಷಕಿಯ ವಿರುದ್ಧ ಕ್ರಮಕ್ಕೆ ಒತ್ತಾಯಿಸಿದ್ದಾರೆ.



ಮಗುವಿಗೆ ಬಾಸುಂಡೆ ಬಂದ ವೀಡಿಯೋಗಳು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದು, ಶಿಕ್ಷಕಿ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ.

ಬಾಲಕಿಯ ತಂದೆ ಶಾಂತಕುಮಾರ ಪತ್ರಿಕೆಯೊಂದಿಗೆ ಮಾತನಾಡಿ, ಮಕ್ಕಳು ಶಾಲೆಗೆ ಬನ್ನಿ ಎಂಬ ಶಿಕ್ಷಣ ಇಲಾಖೆಯ ಅಭಿಯಾನಗಳು ಒಂದೆಡೆಯಾದರೆ, ಕೆಲ ಶಿಕ್ಷಕರ ವರ್ತನೆಗಳಿಂದ ಮಕ್ಕಳು ಶಾಲೆಯತ್ತ ಮುಖಮಾಡುತ್ತಿಲ್ಲ ಎಂಬುದನ್ನೆ ನನ್ನ ಕಿರಿ ಮಗಳೇ ಸಾಕ್ಷಿ. ಮಕ್ಕಳನ್ನು ನಾಲ್ಕಕ್ಷರ ಕಲಿಯಲೆಂದು ಶಾಲೆಗೆ ಕಳಿಸುತ್ತೇವೆ. ಮಕ್ಕಳು ತಪ್ಪು ಮಾಡಿದರೆ ಅದನ್ನು ತಿದ್ದಿ, ತಿಳಿಸಿ ಮನಪರಿವರ್ತನೆ ಮಾಡುವ ಶಕ್ತಿ ಶಿಕ್ಷಕರಲ್ಲಿರಬೇಕು. ಆದರೆ ಕೆಲ ಹಠಮಾರಿ ಶಿಕ್ಷಕ–ರಿಂದ ಮಕ್ಕಳು ಶಾಲೆಗೆ ಹೋಗದೆ ಮನೆಯಲ್ಲೇ ಉಳಿಯುತ್ತಾರೆ. ಶಿಕ್ಷಣ ಇಲಾಖೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ನಡೆಸುತ್ತಿರುವ ಅಭಿಯಾನಗಳು ವ್ಯರ್ಥವಾಗುತ್ತಿವೆ. ದೈಹಿಕ ಶಿಕ್ಷಕಿಗೆ ಹೆದರಿ ಪ್ರತಿ ಶನಿವಾರ ನನ್ನ ಕಿರಿ ಮಗಳು ಶಾಲೆಗೆ ಹೋಗುವುದಿಲ್ಲ ಎಂದು ಹಠ ಮಾಡುತ್ತಾಳೆ. ಕಠಿಣ ಮನಸ್ಸಿನ ಶಿಕ್ಷಕರಿಗೆ ಶಿಕ್ಷಣ ಇಲಾಖೆ ಮೇಲಾಧಿಕಾರಿಗಳು ಸೂಕ್ತ ತರಬೇತಿ ನೀಡಬೇಕು. ಏಟು ನೀಡಿದ ಶಿಕ್ಷಕರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಬಿಇಒಗೆ ಮನವಿ ಮಾಡಲಾಗುವುದು ಎಂದು ತಿಳಿಸಿದರು.


# ಅಂಬಳಿ ಗ್ರಾಮದ, ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಅಧ್ಯಕ್ಷರಾಗಿ ಭರಮರೆಡ್ಡಿ ಅವಿರೋಧ ಆಯ್ಕೆ

**ಹಂಪಿ ಟೈಮ್ಸ್ ಕೊಟ್ಟೂರು**

ತಾಲೂಕಿನ ಅಂಬಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ–ಉಪಾಧ್ಯಕ್ಷರ ಸ್ಥಾನಕ್ಕೆ ಸೋಮವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಕೆ.ಭರಮರೆಡ್ಡಿ ಅವಿರೋಧ ಆಯ್ಕೆ ಯಾಗಿದ್ದಾರೆ. ಉಪಾಧ್ಯಕ್ಷ ಸ್ಥಾನಕ್ಕೆ ಕೆ.ಪುಷ್ಪಲತ ಅಶೋಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ವೇಳೆ ಸದಸ್ಯರುಗಳಾದ ಟಿ.ಶಶಿಧರ್,ಎನ್.ನಾಗಪ್ಪ,ಎಸ್.ಕಲ್ಲೇಶ್,ಎಂ.ಭದ್ರಪ್ಪ,ಎಂ.ಅಡಿವೆಪ್ಪ,ಹೆಚ್.ಬಿ ದುರುಗಪ್ಪ, ಕೆ.ಬಿ ಶಿವಕುಮಾರ್, ಕೆ.ಚಂದ್ರಪ್ಪ, ಟಿ.ಭಾಗ್ಯಮ್ಮ, ಎ.ಎಂ ನಿರ್ಮಲಾ ನಿಜಲಿಂಗಯ್ಯ ಹಾಜರಿದ್ದರು. ಈ ಚುನಾವಣೆ ಪ್ರಕ್ರಿಯೆಯಲ್ಲಿ ಚುನಾವಣೆ ಅಧಿಕಾರಿಯಾಗಿ ಬಿ.ಮಾನಸ ಕಾರ್ಯ ನಿರ್ವಹಿಸಿದರು ಹಾಗೆ ಆಯ್ಕೆಯಾದ ಸದಸ್ಯರುಗಳಿಗೆ ಪ್ರಮಾಣ ಪತ್ರ ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಹೆಚ್.ಪ್ರಭುಶಂಕರ್ ಮತ್ತು ಮುಖಂಡರಾದ ಕೆ.ಸಿದ್ಧಲಿಂಗಪ್ಪ,ಎಸ್. ಮಂಜುನಾಥ, ಎ.ಗುರುಬಸವರಾಜ್, ಚಂದ್ರಪ್ಪ,ಅಜ್ಜಪ್ಪ, ಬಿ.ಸಣ್ಣ ಬಸವರಾಜ್ ಸೇರಿದಂತೆ ಇತರಿದ್ದರು.




ಹಂಪಿ ಟೈಮ್ಸ್ ವೆಬ್‌ನ್ಯೂಸ್‌ನಲ್ಲಿ 14 ಭಾಷೆ, ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ www.hampitimes.com

## ವಚನ ಅರಿವು

### ಬಲ್ಲವರಾಗಬೇಕು

**ಕತ್ತೆಯ ಕರವೆತ್ತಿ ಕರವೆತ್ತಿ ಕರೆದಡೆ**
**ಅದೆತ್ತಣ ವಾರ್ತೆಯೆಂದು ಬಲ್ಲುದು?**
**ಕುಬುದ್ಧಿಯುಳ್ಳವರಿಗೆ ಸುಬುದ್ಧಿಯ ಹೇಳಿದಡೆ**
**ಕುಬುದ್ಧಿ ಮಾಣ್ಬುದೆ ಕೂಡಲಸಂಗಮದೇವಾ?**
**– ಬಸವಣ್ಣ**

ಈ ವಚನದಲ್ಲಿ ಕತ್ತೆಯೊಂದು ರೂಪಕ. ಬಸವಣ್ಣ ಕತ್ತೆಯ ಕುರಿತು ಇಲ್ಲಿ ಮಾತಾಡುತ್ತಿಲ್ಲ. ಮನುಷ್ಯನ ಸ್ವಭಾವವನ್ನು ಕಂಡು ಮಾತಾಡುತ್ತಿದ್ದಾನೆ. ಮನುಷ್ಯ ತನ್ನ ಸ್ವಾರ್ಥಕ್ಕಾಗಿ ತನಗೆಬೇಕೆಂಬ ದುರಾಸೆಯಿಂದ ಮಾಡಬಾರದ ಕೆಲಸಗಳನ್ನು ಮಾಡುವ ಪ್ರಯತ್ನ ಮಾಡುತ್ತಾನೆ. ಮಾಡುತ್ತಲೇ ಇರುತ್ತಾನೆ. ಇಂತಹ ದುಷ್ಟಬುದ್ಧಿಯ ಜನರಿಗೆ ಎಷ್ಟು ಒಳ್ಳೆಯ ಮಾತುಗಳಿಂದ ಬುದ್ಧಿಯನ್ನು ಹೇಳಿದರೂ ಅವರು ತಮ್ಮ ಕೆಟ್ಟ ಪ್ರವೃತ್ತಿಯನ್ನು ಬಿಡುವುದಿಲ್ಲ ಎಂದು ಅಂತಹವರನ್ನು ಸಂವೇದನಾ ರಹಿತರು, ಅಸೂಕ್ಷ್ಮರು ಎಂದು ಜರಿಯುತ್ತಾನೆ ಬಸವಣ್ಣ. ಕೆಟ್ಟ ಬುದ್ಧಿಯನ್ನು ಬಿಟ್ಟು ಒಳ್ಳೆಯ ಬುದ್ಧಿಯಲ್ಲಿ ಬದುಕಬೇಕೆಂಬುದನ್ನು ನಾವು ಅರಿಯಬೇಕು. ಅರಿತರೆ ಬಲ್ಲವರಾಗುತ್ತೇವೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ರಾಜ್ಯ ಮಟ್ಟದ ಕೈಮಗ್ಗ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಜ.02ರಿಂದ

**ಹಂಪಿ ಟೈಮ್ಸ್ ಬಳ್ಳಾರಿ**

ಹೊಸ ವರ್ಷ ಹಾಗೂ ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಜ.02ರಿಂದ ಜ.15ರವರೆಗೆ ರಾಜ್ಯ ಮಟ್ಟದ ವಿಶೇಷ ಕೈಮಗ್ಗ ಮೇಳ ವಸ್ತ್ರಸಿರಿ–2024 ಕೈಮಗ್ಗ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ನಗರದ ಗಡಿಗಿ ಚೆನ್ನಪ್ಪ ವೃತ್ತದ ಗಾಂಧಿ ಭವನದಲ್ಲಿ ಏರ್ಪಡಿಸಲಾಗಿದೆ.

ನವದೆಹಲಿಯ ಅಭಿವೃದ್ಧಿ ಆಯುಕ್ತರು (ಕೈಮಗ್ಗ) ಜವಳಿ ಮಂತ್ರಾಲಯ, ಬೆಂಗಳೂರು ಕೈಮಗ್ಗ ಮತ್ತು ಜವಳಿ ಇಲಾಖೆಯ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ನಿ,(ಕಾವೇರಿ ಹ್ಯಾಂಡಲೂಮ್ಸ್), ಜಿಲ್ಲಾ ಪಂಚಾಯತ್ ಕೈಮಗ್ಗ ಮತ್ತು ಜವಳಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದೆ.

ಜ.02ರಂದು ಸಂಜೆ 04 ಗಂಟೆಗೆ ಯುವಜನ ಸಬಲೀಕರಣ, ಕ್ರೀಡಾ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ನಾಗೇಂದ್ರ ಅವರು ಮೇಳ ಉದ್ಘಾಟಿಸುವರು.

ಕೈಮಗ್ಗ ಮತ್ತು ಜವಳಿ, ಕಬ್ಬು ಹಾಗೂ ಸಕ್ಕರೆ ಅಭಿವೃದ್ಧಿ, ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಎಸ್.ಪಾಟೀಲ ಅವರು ಘನ ಉಪಸ್ಥಿತಿ ಇರುವರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು. ಸಂಸದರಾದ ವೈ.ದೇವೇಂದ್ರಪ್ಪ, ಕರಡಿ ಸಂಗಣ್ಣ, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಈ.ತುಕಾರಾಂ, ಜೆ.ಎನ್.ಗಣೇಶ್, ಬಿ.ಎಂ.ನಾಗರಾಜ್, ವಿಧಾನ ಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ್ ಬಿ.ಪಾಟೀಲ್, ಶಶೀಲ್ ಜಿ.ನಮೋಶಿ, ವೈ.ಎಂ.ಸತೀಶ್, ಮಹಾನಗರ ಪಾಲಿಕೆಯ ಉಪಮಹಾಪೌರರಾದ ಬಿ.ಜಾನಕಿ, ಕಾವೇರಿ ಹ್ಯಾಂಡ್‌ಲೂಮ್ಸ್‌ನ ಅಧ್ಯಕ್ಷರಾದ ಬಿ.ಜೆ.ಗಣೇಶ್, ಕಾವೇರಿ ಹ್ಯಾಂಡ್‌ಲೂಮ್ಸ್‌ನ ನಿರ್ದೇಶಕ ಹಾಗೂ ಮಾಜಿ ಅಧ್ಯಕ್ಷರಾದ ಎನ್.ವಿರೂಪಾಕ್ಷ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಕೈಮಗ್ಗ ಮತ್ತು ಜವಳಿ ಇಲಾಖೆಯ ನಿರ್ದೇಶಕರು ಹಾಗೂ ಜವಳಿ ಅಭಿವೃದ್ಧಿ ಆಯುಕ್ತರಾ ಸಿ.ಎನ್.ಶ್ರೀಧರ್, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಪಂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜೀತ್ ಕುಮಾರ್ ಬಂಡಾರು, ಕೈಮಗ್ಗ ಮತ್ತು ಜವಳಿ ಇಲಾಖೆಯ ಜಂಟಿ ನಿರ್ದೇಶಕರು, ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ ವ್ಯವಸ್ಥಾಪಕ ನಿರ್ದೇಶಕ ಆರ್.ಲಿಂಗರಾಜು ಸೇರಿದಂತೆ ಇತರರು ಅವರು ಉಪಸ್ಥಿತರಿರುವರು ಎಂದು ತಿಳಿಸಿದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

# ತಂದೆಗೆ ತಾಯಿಯಾದ ಮಗಳು

## ಕಲ್ಪನೆಗೆ ಎಟುಕದ ಹೃದಯ ಮಿಡಿಯುವ ಅಪ್ಪ ಮಗಳ ಪವಿತ್ರ ಸಂಬಂಧದ ಒಂದು ನೈಜ ಘಟನೆ

ಎಲ್ಲ ತ್ಯಾಗಗಳಲ್ಲೂ ಶ್ರೇಷ್ಠವಾದ ತ್ಯಾಗ, ಮನ ಕಲಕುವ, ಹೃದಯ ಮಿಡಿಯುವ, ಕಲ್ಪನಾ ಲೋಕದಲ್ಲಿ ಕಲ್ಪನೆಗೆ ಎಟುಕದ ಹೃದಯ ಮಿಡಿಯುವ ಅಪ್ಪ ಮಗಳ ಪವಿತ್ರ ಸಂಬಂಧದ ಒಂದು ನೈಜ ಘಟನೆಯೊಂದನ್ನು ನಿಮ್ಮೆದುರು ಬಿಚ್ಚಿಡುತ್ತಿದೇನೆ ....

ಅಪ್ಪ ಐ ಲವ್ ಯು ಪಾ
ನಾನು ನೋಡಿದ ಮೊದಲ ವೀರ
ಬಾಳು ಕಲಿಸಿದ ಸಲಹೆಗಾರ
ಬೆರಗು ಮೂಡಿಸುವ ಜಾದೂಗಾರ ಅಪ್ಪ.....



ಹೌದು ಅಲ್ವ ಹೀಗೆ ಅಮ್ಮನನ್ನು ಚಿಕ್ಕ ವಯಸ್ಸಿನಲ್ಲಿ ಕಳೆದುಕೊಂಡ ರಿವಾಗೆ ತಂದೆಯೆ ಸರ್ವಸ್ವ ಆಗಿದ್ದ. ಆ ಮಗಳಿಗೆ, ತಂದೆ ತಾಯಿ ಇಬ್ಬರ ಪ್ರೀತಿಯು ನೀಡಿದ ಅಪ್ಪ , ತನ್ನ ಮಗಳನ್ನು ಯಾವುದೆ ಕೊರತೆ ಇಲ್ಲದೆ ಎಲ್ಲ ಜವಾಬ್ದಾರಿಗಳನ್ನು ನಿಭಾಯಿಸಿ ಉನ್ನತ ಶಿಕ್ಷಣ ಕೊಟ್ಟು ಮದುವೆ ಮಾಡಿದ, ತನ್ನ ಜೀವನದಲ್ಲಿ ಆರಾಮಾಗಿ ಜೀವನ ಮಾಡುತ್ತಿರಲು ಯಾರೋ ಮಾಡಿದ ತಪ್ಪಿಗೆ ಬಲಿಯಾಗಿ ಅಪರಾಧಿ ಸ್ಥಾನದಲ್ಲಿ ಅಪ್ಪ ಶಿಕ್ಷೆಗೆ ಗುರಿಯಾಗಿ ಅಪ್ಪ ಸೆರೆಮನೆಯಲ್ಲಿ ಬಂಧಿಯಾಗುತ್ತಾನೆ.

ಕೆಲವು ದಿನಗಳಿಂದ ಅಪ್ಪನ ಸುದ್ದಿಯೇ ಇಲ್ಲ ಎಂದು ಮಗಳು ಅಪ್ಪನ ಮನೆಗೆ ಬಂದಾಗ ಬಂಧುಗಳು ವಿಷಯ ತಿಳಿಸುತ್ತಾರೆ.

ಮಗಳು ಓಡೋಡಿ ಸೆರೆಮನೆಗೆ ಬಂದು ಜೈಲರ್ ಹತ್ತಿರ ಅಪ್ಪನನ್ನು ಭೇಟಿಯಾಗಲು ಮನವಿ ಮಾಡಿಕೊಳ್ಳುತ್ತಾಳೆ. ಆತನು ಹಲವು ಬಾರಿ ಭೇಟಿಯಾಗಲು ನಿರಾಕರಿಸಿದರು, ಪಟ್ಟುಬಿಡದೆ ಅಪ್ಪನನ್ನು ಭೇಟಿಯಾಗಲು ಅನುಮತಿ ಪಡೆಯುತ್ತಾಳೆ. ಆದರೆ ಅವಳಿಗೆ ಒಂದು ನಿರ್ಬಂಧ ಹೇರಿರುತ್ತಾರೆ, ಅದೇನೆಂದರೆ ಭೇಟಿಯಾಗುವ ಸಂದರ್ಭದಲ್ಲಿ ಯಾವುದೇ ತಿಂಡಿತಿನಿಸುಗಳನ್ನು ಯಾವುದೆ ವಸ್ತುಗಳನ್ನು ತೆಗೆದುಕೊಂಡು ಹೋಗುವಂತಿಲ್ಲ ಎಂದು. ಆಗಲಿ ಅಪ್ಪನ ಭೇಟಿ ಮುಖ್ಯ, ಯೋಗಕ್ಷೇಮ ಮುಖ್ಯ ಎಂದು ಅಪ್ಪನನ್ನು ಭೇಟಿ ಮಾಡಿ ನಡೆದ ಘಟನೆಯ ಬಗ್ಗೆ ತಿಳಿದು ಕೊಂಡು ಮರಗುತ್ತಾಳೆ.

ಹೀಗೆಯೆ ದಿನಾಲೂ ಅಪ್ಪನನ್ನು ಭೇಟಿಯಾಗಲು ಬರುತ್ತಿರುವ ಮಗಳಿಗೆ ದಿನಾಲೂ ಪರೀಕ್ಷೆ ಮಾಡಿ ಯಾವುದೆ ಆಹಾರ ಹಾಗೂ ವಸ್ತುಗಳನ್ನು ತೆಗೆದುಕೊಂಡು ಹೋಗದಂತೆ ಎಲ್ಲಾ ಪರೀಕ್ಷೆ ಮಾಡಿ ಒಳಗೆ ಬಿಡುತ್ತಿದ್ದರು. ಅಪ್ಪಾನನ್ನು ದಿನಾಲೂ ಭೇಟಿಯಾಗುತ್ತಿರಲು ಅಪ್ಪನ ಅರೋಗ್ಯ ದಿನದಿಂದ ದಿನಕ್ಕೆ ಕ್ಷಿಣಿಸಲು ಪ್ರಾರಂಭವಾಗಿ ಅಪ್ಪ ನಿಷಕ್ತನಾಗುತ್ತಿರಲು , ಅಪ್ಪನ ಈ ಸ್ಥಿತಿಗೆ ಕಾರಣ ಹುಡುಕಿದಾಗ ಗೊತ್ತಾಗುತ್ತೆ ಆಹಾರ ಹಾಗೂ ಒಂದು ಹನಿಯೂ ನೀರು ಕೊಡದೆ ಹೀಗೆಯೆ ನರಕ ಯಾತನೆ ಅನುಭವಿಸಿ ಸಾಯುವ ಕಠಿಣ ಶಿಕ್ಷೆ ವಿಧಿಸಿದೆ ಎಂದು.

ಮಗಳಿಗೆ ಏನು ಅರಿಯದ ಮುಗ್ಧ ಅಪ್ಪನ ಈ ಸ್ಥಿತಿ ನೋಡಿ ತುಂಬಾ ನೋವಾಯಿತು. ತಾಯಿ ಇಲ್ಲದ ತಬ್ಬಲಿಗೆ ಅಪ್ಪಾನೆ ಅವಳ ಪಾಲಿನ ತಂದೆ ತಾಯಿ ಆಶ್ರಯದಾತ ಆಗಿದನ್ನು, ಅಪ್ಪನನ್ನು ಹೇಗಾದರೂ ಮಾಡಿ ಬದುಕಿಸಬೇಕು ಎಂದು ನಿರ್ಧಾರ ಮಾಡುತ್ತಾಳೆ. ಏನೆಲ್ಲ ಪ್ರಯತ್ನ ಮಾಡಿದರು ಅಪ್ಪನ ಶಿಕ್ಷೆ ಕಮ್ಮಿಯಾಗುವುದಿಲ್ಲ ಎಂದು ಅರಿತು ಅವಳು ಒಂದು ದೃಢವಾದ, ಗಟ್ಟಿಯಾದ, ಎಲ್ಲು ಕೇಳರಿಯದ ತ್ಯಾಗಕ್ಕೆ ಮುಂದಾಗುತ್ತಾಳೆ. ಬಾಣಂತಿಯಾದ ಅವಳು ತನ್ನ ಹಸುಗೂಸನ್ನು ತೆಗೆದುಕೊಂಡು



**ನಂದಿನಿ ಸನಬಾಲ್**
ಶಿಕ್ಷಕರು, ಗುಲ್ಬರ್ಗ

ಅಪ್ಪನಿಗೆ ಭೇಟಿಯಾಗಿ ಒಂದು ನಿರ್ಧಾರಕ್ಕೆ ಬರುತ್ತಾಳೆ. ನಾನೂ ಹಸುಗೂಸು ಇದ್ದಾಗ ತಾಯಿಯ ಮುಖವೂ ನೋಡದ ನನ್ನಗೆ ತಂದೆ ತಾಯಿ ಇಬ್ಬರ ಪ್ರೀತಿ ಕೊಟ್ಟು ನನ್ನನ್ನು ಬೆಳೆಸಿದ ನೀನು ಈಗ ನನಗೆ ಹುಟ್ಟಿದ ಮಗುವಿನ ಜೋತೆ ನೀನು ಕೂಡ ನನ್ನ ನಿನ್ನೊಬ್ಬ ಮಗು ಅಂತ ಭಾವಿಸಿದ್ದೇನೆ. ಈಗ ನನ್ನ ಸರದಿ ಅಪ್ಪ ನೀನು ನನ್ನ ಎಳೆಗಿಸು ಕಣಪ್ಪ ನಿನ್ನ ಈ ಸ್ಥಿತಿ ನನಿಂದ ನೋಡಲು ಸಾಧ್ಯವೆ?. ಅಪ್ಪ ನೀನು ಕೂಡ ನನ್ನ "ಎದೆ ಹಾಲು ಕುಡಿಯಬೇಕು". ಇಲ್ಲಿ ನಾನೂ ನಿನ್ನ ತಾಯಿಯ ಸ್ಥಾನದಲ್ಲಿದ್ದೆನೆ ಎಂದಾಗ! ಅಪ್ಪನ ಮನ ಕಲುಕಿತು, ಬೇಡಾ ಮಗಳೆ ಇದು ಸಂಬಂಧಗಳಿಗೂ ನಿಲುಕದ ವಿಷಯ ಇದು ಅಸಾಧ್ಯ ಮಗಳೆ ಎಂದು ಮಗಳ ಕಾಲಿಗೆ ಬಿದ್ದು ಅಳಲಾರಂಭಿಸಿದ. ಆಗ ಮಗಳು ಹೇಳುತ್ತಾಳೆ ಅಪ್ಪ ನನ್ನನ್ನು ನಿನ್ನ ತಾಯಿ ಅಂತ ಸ್ವೀಕಾರ ಮಾಡು, ನಾನು ನನ್ನ ಕಂದ ಅಂತ ಹಾಲುಣಿಸುವೆ ಎಂದು ಸಮರ್ಪಣಾ ಭಾವದಿಂದ ತಂದೆಯ ಮನವಳಿಸುವಳು. ಮಾತೃ ಹೃದಯಕ್ಕೆ ಯಾವುದೆ ನಿರಾಸೆ ಆತಂಕ ಬೇಡ, ಅಪ್ಪ ನಿನ್ನನ್ನು ಬದುಕಿಸುವ ಜವಾಬ್ದಾರಿ ನನ್ನದು, ನನ್ನ ತಂದೆ ತಾಯಿ ನನ್ನ ಮಗು ನನ್ನ ಪ್ರಪಂಚ ನೀನೇ ತಾನೆ ಎಂದು ದಿನಾಲೂ ತಂದೆಗೆ ಹಾಲುಣಿಸಲು ಪ್ರಾರಂಭಿಸುವಳು. ಸಾವಿನ ದವಡೆಯಲ್ಲಿ ಸಿಲುಕಿದ ವ್ಯಕ್ತಿ ನಿಧಾನವಾಗಿ ಚೇತರಿಸಿಕೊಳ್ಳುತ್ತಿರಲು ಜೈಲಿನ ಅಧಿಕಾರಿಗೆ ಆಶ್ಚರ್ಯ.

ಇದು ಹೇಗೆ ಸಾಧ್ಯ? ಅನ್ನ ನೀರು ಇಲ್ಲದ ವ್ಯಕ್ತಿ ಸಾವಿನ ವಿಷಯ ಇರಲಿ ,ಚೇತರಿಸಿಕೊಳ್ಳುಳಲ್ಲು ಕೂಡ ಸಾಧ್ಯ ಇಲ್ಲ.. ಎಂದು ಗುಸು ನಡೆಯುತಿತ್ತು. ವಿಷಯ ತಿಳಿಯಲು ಉನ್ನತ ಅಧಿಕಾರಿ ಜೈಲಿನ ಇತರ ಅಧಿಕಾರಿಗಳಿಗೆ ಆದೇಶ ಹೊರಡಿಸಿದ. ಈ ವ್ಯಕ್ತಿಯ ಮಗಳ ಮೇಲೆ ನಿಗಾ ವಹಿಸಬೇಕು, ಅವಳು ಜೈಲಿನಲ್ಲಿ ಬಂದಾಗ ಅವಳಿಗೆ ಗೊತ್ತಿಲ್ಲದೆ ಅವಳನ್ನು ಹಿಂಬಾಲಿಸಿ ವಿಷಯ ತಿಳಿದುಕೊಳ್ಳಿ ಅಂತ. ವಿಷಯ ಅರಿತ ಅಧಿಕಾರಿಗಳು ದಿಗ್ಭ್ರಮೆಗೊಂಡು ಉನ್ನತ ಅಧಿಕಾರಿಗಳಿಗೆ ಘಟನೆ ನಡೆದಿದ್ದು ತಿಳಿಸುತ್ತಾರೆ. ತಂದೆ ಜೊತೆ ಮಗಳಿಗೂ ಕಠಿಣ ಶಿಕ್ಷೆ ವಿಧಿಸಲು ಅದೇಶಿಷಿದಾಗ, ಮಗಳ ಗಂಡ ಬಂದು ತನ್ನ ಹೆಂಡತಿ ಮತ್ತು ಮಾವನ ಪರವಾಗಿ ಕೋರ್ಟಿಗೆ ಮೊರೆ ಹೋದಾಗ, ವಾದವಿವಾದ ವೀಕ್ಷಿಸಿದ ಜನರು ಹಾಗೂ ನ್ಯಾಯಾಲಯದ ತೀರ್ಪು ಅಪ್ಪ ಹಾಗೂ ಮಗಳ ಪವಿತ್ರ ಸಂಬಂಧದ ಪರವಾಗಿದ್ದು. ತಂದೆ ಮತ್ತು ಮಗಳ ಸಂಬಂಧಕ್ಕೆ ಗೌರವ ನೀಡಿ, ಇವರನ್ನು ನಿರಪರಾಧಿ ಎಂದು ತೀರ್ಮಾನ ನೀಡಿ ಬಿಡುಗಡೆ ಮಾಡುವದು. ನಿಜಕ್ಕೂ ಹೃದಯ ಮಿಡಿಯುವ ಅಪ್ಪ ಮಗಳ ಸಂಬಂಧ ಹೀಗೆಯೆ ಇರಲಿ ಅಂತ ಹಾರೈಸುವ...

# ಹೊಸ ವರ್ಷಕ್ಕೆ ನವ ಸಂಕಲ್ಪಗಳು

ಇನ್ನೇನು ಕ್ಯಾಲೆಂಡರ್ ತಿಂಗಳಿನ ಹಳೆಯ ವರ್ಷ ಮುಗಿದು.... ಹೊಸ ವರ್ಷ ಸ್ವಾಗತಿಸಿದ್ದೇವೆ. ಪ್ರತಿ ಹೊಸ ವರ್ಷವೂ ಮನುಷ್ಯನಲ್ಲಿ ಹೊಸತನ್ನು ಕಲಿಯಲು, ಹೊಸ ವಿಚಾರಗಳನ್ನು ಒಳ್ಳೆಯ ಅಭ್ಯಾಸಗಳನ್ನು ರೂಢಿಸಿಕೊಳ್ಳಲು ಮನುಷ್ಯನಿಗೆ ಪ್ರೇರಣೆ ನೀಡುತ್ತದೆ. ಅಂತೆಯೇ ದಿನಗಳೆದಂತೆ ಮನುಷ್ಯ ತನ್ನದೇ ಜೀವನದ ಜಂಜಾಟದಲ್ಲಿ ಅವುಗಳನ್ನು ಮರೆತು ಕೂಡ ಬಿಡುತ್ತಾನೆ. ಮತ್ತೆ ಪಶ್ಚಾತಾಪ ಪಟ್ಟು ಅವುಗಳನ್ನು ಮುಂದುವರೆಸಲು ಅಪೇಕ್ಷಿಸಿದಾಗ ಆತ ತನ್ನಲ್ಲಿ ತಾನು ಹೇಳಿಕೊಳ್ಳುವುದು ಹೊಸ ವರ್ಷದಿಂದ ಖಂಡಿತವಾಗಿ ಮಾಡುತ್ತೇನೆ ಎಂದು.

ಹಾಗೆ ಹೊಸ ವರ್ಷದಲ್ಲಿ ಮಾಡಿಕೊಳ್ಳಬಹುದಾದ ಮತ್ತು ಸಾಧಿಸಬಹುದಾದ ಸಂಕಲ್ಪಗಳನ್ನು ಪಟ್ಟಿ ಮಾಡೋಣ.

**1** ರಾತ್ರಿ ಬೇಗ ಮಲಗಿ ಮುಂಜಾನೆ ಬೇಗ ಏಳಬೇಕು.... ಇತ್ತೀಚಿಗಿನ ದಿನಗಳಲ್ಲಿ ಇದು ಕಷ್ಟ ಎಂದೆನಿಸಿದರೂ ನಮ್ಮ ಮನೋ ದೈಹಿಕ ಆರೋಗ್ಯವನ್ನು ಕಾಯ್ದುಕೊಳ್ಳಲು ಅತ್ಯಂತ ಅವಶ್ಯಕವಾದದ್ದು. ರಾತ್ರಿ 8:00 ಗಂಟೆಗೆ ಮುಂಚೆಯೇ ಆಹಾರವನ್ನು ಸೇವಿಸಿ ಸುಮಾರು 2 ಗಂಟೆಗಳ ನಂತರ 10ರಿಂದ 10.30ರ ಸುಮಾರಿಗೆ ಮಲಗಿದರೆ ದೇಹದ ಚಯಾಚಪಯ ಕ್ರಿಯೆಗಳಲ್ಲಿ ಯಾವುದೇ ರೀತಿಯ ವ್ಯತ್ಯಯವಾಗುವುದಿಲ್ಲ. ದೇಹಕ್ಕೆ ಸಂಪೂರ್ಣ ವಿಶ್ರಾಂತಿ ದೊರೆಯುತ್ತದೆ. ಹದಿಹರೆಯದ ವಯಸ್ಸಿನಲ್ಲಿ ಕಲ್ಲು ತಿಂದು ಅರಗಿಸಿಕೊಳ್ಳುತ್ತೇನೆ ಎಂಬ ಹುಂಬ ಧೈರ್ಯವೇನೋ ಇರುತ್ತದೆ ನಿಜ. ಯಾವುದೇ ರೀತಿಯ ದೈಹಿಕ ಶ್ರಮಕ್ಕೆ ಒಳಗಾಗದ ದೇಹದಲ್ಲಿ ಆಹಾರ ಜೀರ್ಣಿಸುತ್ತದೆ ನಿಜ ಆದರೆ ಅದು ಕೊಬ್ಬಾಗಿ ಪರಿಣಮಿಸುತ್ತದೆ. ದೇಹಕ್ಕೆ ಅವಶ್ಯಕವಾದಷ್ಟು ಕೊಬ್ಬು ಒಳ್ಳೆಯದು ಆದರೆ ಅಗತ್ಯಕ್ಕಿಂತ ಹೆಚ್ಚಿನ ಕೊಬ್ಬು ಬೊಜ್ಜಿನ ರೂಪದಲ್ಲಿ ಪರಿಣಮಿಸುತ್ತದೆ ಎಂಬುದನ್ನು ಅರಿಯಬೇಕು.

**2** ಮುಂಜಾನೆ ಬೇಗ ಎದ್ದ ನಂತರ ಲಘು ವ್ಯಾಯಾಮ ಮತ್ತು ಕನಿಷ್ಠ ಅರ್ಧ ಗಂಟೆಯ ನಡಿಗೆಯನ್ನು ಕಡ್ಡಾಯವಾಗಿ ಪಾಲಿಸಬೇಕು. ಇದು ದೇಹದಲ್ಲಿ ನವ ಚೈತನ್ಯವನ್ನು ತರುತ್ತದೆ. ಇಡೀ ದಿನದ ಕಾರ್ಯಭಾರದ ಸಂಘರ್ಷವನ್ನು ಲೀಲಾಜಾಲವಾಗಿ ತೊಡೆದು ಹಾಕುತ್ತದೆ. ಬೇರೆ ಊರುಗಳಿಗೆ ಹೋದಾಗ ಮತ್ತಿತರ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡಾಗ ಒಂದೆರಡು ದಿನಗಳ ಮಟ್ಟಿಗೆ ಯೋಗ ಮತ್ತು ವಾಕಿಂಗ್ ತಪ್ಪಿದರೆ ಪರವಾಗಿಲ್ಲ ಮತ್ತೆ ಮರುದಿನದಿಂದ ಈ ಅಭ್ಯಾಸವನ್ನು ತಪ್ಪದೇ ಮಾಡಿ... ಮುಂದಿನ ವರ್ಷದಿಂದ ಮಾಡುತ್ತೇನೆ ಎಂದು ಮುಂದೆ ಮಾತ್ರ ಹಾಕಬೇಡಿ.

**3** ಪ್ರತಿದಿನವೂ ಸಾಕಷ್ಟು ಪ್ರಮಾಣದ ನೀರನ್ನು ಕುಡಿಯಬೇಕು... ಹೆಚ್ಚು ನೀರು ಕುಡಿಯುವುದರಿಂದ ನಮ್ಮ ದೇಹದ ಆರೋಗ್ಯ ಸುಧಾರಿಸುತ್ತದೆ. ಎಷ್ಟೋ ಬಾರಿ ನೀರೇ ಆಹಾರ ಆದಾಗ ದೇಹದ ಜೀರ್ಣಾಂಗಗಳಿಗೆ ವಿಶ್ರಾಂತಿ ದೊರೆತು ಅವು ಮತ್ತೆ ಹೆಚ್ಚಿನ ಚಟುವಟಿಕೆಯಿಂದ ಕಾರ್ಯನಿರ್ವಹಿಸಲು ಅನುಕೂಲವಾಗುತ್ತದೆ. ಮನುಷ್ಯ ದೇಹ ನಿರ್ಜಲೀಕರಣದ ಸಮಸ್ಯೆಗೆ ಒಳಗಾದಾಗ ಕುಡಿಯುವ




ಒಂದು ಲೋಟ ನೀರು ಜೀವದಾಯಿನಿ ಎನಿಸುತ್ತದೆ. ಸಾಕಷ್ಟು ಪ್ರಮಾಣದ ನೀರು ಸೇವಿಸುವುದರಿಂದ ದೇಹದ ಮೂತ್ರಪಿಂಡದಲ್ಲಿ ಕಲ್ಲು ಪಿತ್ತಕೋಶದಲ್ಲಿ ಹರಳು ಎಂಬಂತಹ ಹಲವಾರು ಸಮಸ್ಯೆಗಳು ತಲೆದೋರುವುದೇ ಇಲ್ಲ.

**4** ಒಳ್ಳೆಯ ಸತ್ವಯುತ ಆಹಾರ ನಿಮ್ಮದಾಗಿರಲಿ... ಏನೋ ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತೇನೆ ಎಂಬ ಭಾವ ಬೇಡ. ನಿಮ್ಮ ಆಹಾರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತರಕಾರಿ, ಹಣ್ಣುಗಳು ಇದ್ದು ಪಿಷ್ಟ ಪದಾರ್ಥಗಳಿಗೆ ಕಡಿಮೆ ಆದ್ಯತೆ ನೀಡಿ. ತುಸು ಕೊಬ್ಬಿನ ಅಂಶವಿರುವ ಆಹಾರ ಪದಾರ್ಥಗಳು ದೇಹಕ್ಕೆ ಹಿತವನ್ನು ಕೊಡುತ್ತವೆ ಆದರೆ ಕೊಬ್ಬೇ ಪ್ರಧಾನ



**ವೀಣಾ ಹೇಮಂತಗೌಡ ಪಾಟೀಲ್,**
**ಮುಂಡರಗಿ, ಗದಗ**

ಆಹಾರವಲ್ಲ ಎಂಬುದನ್ನು ನೆನಪಿನಲ್ಲಿಟ್ಟು ಕೊಳ್ಳಿ. ಊಟದಲ್ಲಿ ಉಪ್ಪಿನ ಕಾಯಿ ಇರುವಷ್ಟೇ ಆಹಾರದಲ್ಲಿ ಕೊಬ್ಬಿನ ಪ್ರಮಾಣ ಇರಬೇಕು.

**5** ಯಾವಾಗಲಾದರೂ ಬಾಯಿ ಚಪಲಕ್ಕೆ ಹೊರಗಿನ ತಿಂಡಿ ತೀರ್ಥಗಳನ್ನು ಸೇವಿಸುವುದು ತಪ್ಪಲ್ಲ, ಆದರೆ ಪ್ರತಿದಿನವೂ ನಿಯಮಿತವಾಗಿ ಹೊರಗಿನ ಕುರುಕಲು ತಿಂಡಿಗಳನ್ನು ಎಗ್ ಪಫ್,ವೆಜ್ ಪಫ್,ಪಿಜ್ಜಾ ಬರ್ಗರ್ ಗಳಂತಹ ತಿನಿಸುಗಳನ್ನು ತಿನ್ನುವುದು ಅನಾರೋಗ್ಯಕರ ಅಷ್ಟೇ ಅಲ್ಲ ಬೇಡದ ಅತಿಥಿಗಳನ್ನು ದೇಹವೆಂಬ ಮನೆಯೊಳಕ್ಕೆ ಬಿಟ್ಟುಕೊಂಡಂತಾಗುತ್ತದೆ. ಹೆಚ್ಚಿನ ಪ್ರಮಾಣದ ಕೊಬ್ಬು ದೇಹದಲ್ಲಿ ಸೇರಿಕೊಂಡು ದೇಹದ ಗೋಡೆಗಳಿಗೆ ಅಲ್ಲಲ್ಲಿ ಮೆತ್ತಿಕೊಂಡು ರಕ್ತನಾಳಗಳನ್ನು ಸಂಕುಚಿಸುತ್ತದೆ ಪರಿಣಾಮವಾಗಿ ದೇಹದಲ್ಲಿ ಸರಾಗವಾದ ರಕ್ತ ಪರಿಚಲನೆ ಸಾಧ್ಯವಾಗದೆ ಹೃದಯದ ಆಘಾತ, ಹೃದಯ ಸ್ತಂಭನಗಳಂತಹ ತೊಂದರೆಗಳಿಗೆ ಸಿಲುಕಬೇಕಾಗುತ್ತದೆ.

**6** ಅತ್ಯಂತ ಕ್ಷಣಿಕವಾದ ಈ ಬದುಕಿನಲ್ಲಿ ಇರುವ ನಾಲ್ಕು ದಿನಗಳನು ದ್ವೇಷ, ಅಸೂಯೆ, ಅಜ್ಞಾನ ಅಹಂಕಾರಗಳೆಂಬ ಒಡವೆಗಳನ್ನು ತೊಟ್ಟು ಮೆರೆಯುವುದಕ್ಕಿಂತ ಪ್ರೀತಿ, ವಿಶ್ವಾಸ, ನಂಬಿಕೆ, ತಾಳ್ಮೆ,ಆತ್ಮೀಯತೆಗಳನ್ನು ಹೊಂದಿರುವ ಸರಳ ಜೀವನ ಶೈಲಿಯನ್ನು ಅಳವಡಿಸಿಕೊಳ್ಳೋಣ. ಖಡ್ಗಕ್ಕೆ ಖಡ್ಗವೇ ಉತ್ತರವಾಗಬಾರದು... ಹರಿತವಾದ ಮಾತುಗಳು ಮನಸ್ಸನ್ನು ಘಾಸಿ ಮಾಡುತ್ತವೆ.. ಬೇರೆಯವರು ನಿಮ್ಮನ್ನು ನೋಯಿಸಿದಾಗ ಅತ್ಯಂತ ತಾಳ್ಮೆಯಿಂದ ಅವರನ್ನು ದೂರ ಸರಿಸಿ. ಆದರೆ ನಿಮ್ಮವರು ಎಂದು ನೀವಂದುಕೊಂಡವರೇ ನಿಮ್ಮನ್ನು ನೋಯಿಸಿದರೆ.... ಸಾಧ್ಯವಾದರೆ ನಿಮ್ಮ ಅಭಿಪ್ರಾಯಗಳನ್ನು ತಿಳಿ ಹೇಳಲು ಪ್ರಯತ್ನಿಸಿ. ಇಬ್ಬರ ವಿಚಾರಗಳಲ್ಲಿ ಒಮ್ಮತ ಮೂಡದಿದ್ದಾಗ, ಅವರವರ ಅಭಿಪ್ರಾಯಗಳು ಅವರವರಿಗೆ ಎಂಬ ಸರಳ ಮತ್ತು ಬಹುಮುಖ್ಯವಾದ ತತ್ವಕ್ಕೆ ಶರಣಾಗಿ. ಆರೋಗ್ಯಕರ ಮಾನಸಿಕತೆಯನ್ನು ರೂಢಿಸಿಕೊಳ್ಳಿ.

**7** ಓದು, ಚಿತ್ರಕಲೆ, ಸಂಗೀತ ಪ್ರವಾಸ ಮುಂತಾದ ಉತ್ತಮ ಆರೋಗ್ಯಕರ ಹವ್ಯಾಸಗಳನ್ನು ನಿಮ್ಮದಾಗಿಸಿಕೊಳ್ಳಿ. ಇದು ಜೀವನದಲ್ಲಿ ಹೊಸ ವಿಷಯಗಳನ್ನು ಅರಿಯಲು ಸಹಾಯವಾಗುವುದಲ್ಲದೇ, ಬದುಕಿನಲ್ಲಿ ಹೊಸ ಹುಮ್ಮಸ್ಸನ್ನು ತುಂಬಿ ಏಕತಾನತೆಯನ್ನು ದೂರ ಮಾಡುತ್ತದೆ.

**8** ಬಿ ಬ್ರೀಫ್.... ಅತ್ಯಂತ ಕಡಿಮೆ ಮಾತನಾಡಿ ಮತ್ತು ನೀವು ಹೇಳಬೇಕೆಂದಿರುವ ವಿಷಯವನ್ನು ಅತ್ಯಂತ ಕ್ಲುಪ್ತವಾಗಿ ಹೇಳುವ ಕಲೆಯನ್ನು ರೂಢಿಸಿಕೊಳ್ಳಿ. ಮಂತ್ರಕ್ಕಿಂತ ಉಗುಳು ಜಾಸ್ತಿ ಎಂಬಂತೆ ಆಗಬಾರದು ನೋಡಿ. ನಾವು ಹೇಳುವ ವಿಷಯಗಳು ಅವರನ್ನು ಮುಟ್ಟುವ ಮುಂಚೆಯೇ ಅನವಶ್ಯಕವಾದ ಎಳೆಯುವಿಕೆಯಿಂದ ವಿಷಯಾಂತರಗಳಾಗುವ ಸಾಧ್ಯತೆಗಳು ಇರುತ್ತವೆ ಜೊತೆಗೆ ಅವರ ಗಮನ ಬೇರೆ ಡೆ ತಿರುಗುತ್ತದೆ. ಸಾಧ್ಯವಾದಷ್ಟು ಇದನ್ನು ತಪ್ಪಿಸಿ. ಹೇಳುವ ವಿಷಯವನ್ನು ಅತ್ಯಂತ ಸ್ಪಷ್ಟವಾಗಿ ಸ್ಫುಟ ವಾಗಿ ಕಡಿಮೆ ಶಬ್ದಗಳನ್ನು ಬಳಸಿ ಹೇಳುವ ಕಲೆಯನ್ನು ರೂಢಿಸಿಕೊಳ್ಳಿ

**9** ಮನುಷ್ಯ ಸಮಾಜ ಜೀವಿ... ಈ ಸಮಾಜ ಗೊತ್ತಿದ್ದೋ ಗೊತ್ತಿಲ್ಲದೆಯೋ ಸಾಕಷ್ಟು ಕೊಡುಗೆಗಳನ್ನು ನಮಗೆ ನೀಡಿರುತ್ತದೆ. ಈ ಸಮಾಜದಲ್ಲಿ ಹುಟ್ಟಿದ ನಾವುಗಳು ಸಮಾಜಮುಖಿಯಾಗಿ ಕಾರ್ಯನಿರ್ವಹಿಸಬೇಕು. ಸಮಾಜದ ಅತ್ಯಂತ ಕೆಳ ಸ್ತರದ ಜನರ ಜೀವನವನ್ನು ಸುಧಾರಿಸುವ ನಿಟ್ಟಿನಲ್ಲಿ ನಿಮ್ಮ ಅಳಿಲು ಸೇವೆಯನ್ನು ಸಲ್ಲಿಸಲೇಬೇಕು. ಸಾಮಾಜಿಕ ಸೇವೆ ಎಂಬುದು *ಸಾಮಾಜಿಕ ಜವಾಬ್ದಾರಿ*ಯಾಗಿ ಬದಲಾಗಬೇಕು. ನಮ್ಮ ಸುತ್ತಲಿನ ಸಮಾಜಕ್ಕೆ ನಮ್ಮ ಕೈಲಾದಷ್ಟು ಸಹಾಯವನ್ನು ಮಾಡುವ ಮೂಲಕ ಅವರನ್ನು ಮೇಲೆ ಎತ್ತುವ ಸಮಾಜಮುಖಿಯಾಗಿ ಕಾರ್ಯನಿರ್ವಹಿಸಬೇಕು.

ಈ ನವ ಸಂಕಲ್ಪಗಳನ್ನು ಅಳವಡಿಸಿಕೊಂಡು ನಮ್ಮ ನಮ್ಮ ಜೀವನಗಳನ್ನು ಉನ್ನತ ಸ್ತರಕ್ಕೆ ಒಯ್ಯುವುದರ ಜೊತೆ ಜೊತೆಗೆ ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಕಾರಣರಾಗೋಣ ಎಂಬ ಸಂಕಲ್ಪ ಮಾಡುತ್ತಾ ಕ್ಯಾಲೆಂಡರ್ ತಿಂಗಳ ಹೊಸ ವರ್ಷವನ್ನು ಸ್ವಾಗತಿಸೋಣ.

ಹಂಪಿ ಟೈಮ್ಸ್
HAMPI TIMES

ಮಂಗಳವಾರ / Tuesday 02.01.2024



ಮೈಕ್ರೋ ನ್ಯೂಸ್

## ತಂದೆ ಮಕ್ಕಳ ಮಿಲನ



ದಿಟ್ಟ ತನದಲಿ ಹಯವ ಬಂಧಿಸಿ
ಕಟ್ಟಿ ಛಲದಲಿ ಸಮರಕೆಳಸಿದ
ಪುಟ್ಟ ಬಾಲರ ಕಂಡು ಭ್ರಮಿತನು ದೇವ
ಶ್ರೀರಾಮ
ಸಿಟ್ಟುಗೊಳ್ಳದೆ ನುಡಿದನವರಲಿ
ಕೆಟ್ಟ ಹಟವನು ತೊರೆದು ಮೊದಲಲಿ
ಬಿಟ್ಟು ಕಳುಹಿರಿ ಯಜ್ಞ ಕುದುರೆಯ, ಬೇಡ
ಸಂಗ್ರಾಮ

ಇಂತು ಲವ ಕುಶರಲ್ಲಿ ಮಮತೆಯು
ಬಂತು ಮನದಲಿ ರಾಮಚಂದ್ರಗೆ
ನಿಂತು ಬಾಲರ ತಬ್ಬುವಾಸೆಯು ಬೆಳೆದು
ಮನದೊಳಗೆ
ಇಂಥ ಮಾತಿನ ಯತ್ನ ಸಾಗಿರೆ
ಹಂತ ಹಂತದಿ ಮಣಿಸಲಾಗದೆ
ಚಿಂತೆಯಾಯಿತು ನೊಂದ ಮನದಲಿ
ತಂದ ಬೇಗುದಿಗೆ

ಮುಂದೆ ನಿಂತಿಹ ಮಕ್ಕಳಿಬ್ಬರ
ತಂದೆ ತಾನೆಂದರಿಯ ದೇವನು
ಕಂದರೀರ್ವರ ಮುದ್ದು ಮೊಗವನು ಕಂಡು
ಯೋಚಿಸಿದ
ಚಂದ ಮಾತಲಿ ಮಣಿಸಲಾಗದೆ
ಕೊಂದು ಕಳೆಯುವುದೆಂತು ಚಿಣ್ಣರ
ನೊಂದ ಮನದಲಿ ದೇವ ರಘುಪತಿ
ಸಮರಕಣಿಯಾದ


ಸಿದ್ಧಗೊಂಡಿತು ಸಮರಕಣವದು
ಯುದ್ಧ ರಂಗದಲೇನಿದಚ್ಚರಿ
ಗೆದ್ದ ಬಾಲರು ಶೌರ್ಯದಿಂದಲಿ
ಪಿತನೆಂದರಿಯದೆಲೆ
ಸುದ್ದಿಯರಿತಳು ಮಾತೆ ಜಾನಕಿ
ಮುದ್ದು ಮಾಡದೆ ಪುತ್ರರತ್ನರ
ಖುದ್ದು ಪುತ್ರರನಿರಿಸಿ ರಾಮನ ದಿವ್ಯ
ಚರಣದಲೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

### ತುಂಗಭದ್ರಾ ನೀರಿನ ಮಟ್ಟ



| ಸೋಮವಾರ : 01-01-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1589.08 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.278 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1624.63 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 9761 ಕ್ಯುಸೆಕ್ |
| ಸಾಮರ್ಥ್ಯ | 75.290 ಟಿಎಂಸಿ |

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಶಿಕ್ಷಣವಿಲ್ಲದೇ ಸಾಧನೆ ಅಸಾಧ್ಯ

**ಡಿಸಿ ಡಾ.ಕೆ.ಆರ್ ದುರುಗೇಶ ಹೇಳಿಕೆ | ಜಿಲ್ಲಾಡಳಿತದಿಂದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ**



■ ಹಂಪಿ ಟೈಮ್ಸ್ ರಾಯಚೂರು

ಅಮರ ಶಿಲ್ಪಿ ಜಕಣಾಚಾರಿ ಅವರ ಆದರ್ಶ, ಮಾನವೀಯ ಮೌಲ್ಯಗಳನ್ನು ಬೆಳೆಸುವ ಮೂಲಕ ಹಾಗೂ ಮಕ್ಕಳಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುವ ಮೂಲಕ ವಿಶ್ವಕರ್ಮ ಸಮಾಜ ಇನ್ನೂ ಹೆಚ್ಚಿನ ಅಭಿವೃದ್ಧಿ ಹೊಂದಬೇಕೆಂದು ಅಪರ ಜಿಲ್ಲಾಧಿಕಾರಿ ಡಾ.ಕೆ.ಆರ್ ದುರುಗೇಶ ಅವರು ಹೇಳಿದರು.

ಅವರು ಸೋಮವಾರ ನಗರದ ಕನ್ನಡ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಗರಸಭೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಹಮ್ಮಿಕೊಂಡಿದ್ದ ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಪ್ರಾಚೀನ ಕಾಲದ ರಾಜಮಹಾರಾಜರು ಕಲೆಗೆ ಅತಿ ಹೆಚ್ಚಿನ ಮಹತ್ವವನ್ನು ನೀಡುತ್ತಿದ್ದರು. ಕಲೆ, ಪ್ರತಿಭೆ ಇರುವವರಿಗೆ ರಾಜಸನ್ಮಾನ ನೀಡಲಾಗುತಿತ್ತು. ಅಂತಹ ಕಾಲದಲ್ಲಿ ತನ್ನ ಕಲೆಯ ಮೂಲಕ ಜಗತ್ತಿಗೆ ಭಾರತದ ಸಂಸ್ಕೃತಿಯನ್ನು ಪರಿಚಯಿಸಿದವರು ಅಮರ ಶಿಲ್ಪಿ ಜಕಣಾಚಾರಿ.

ಪ್ರತಿಯೊಬ್ಬರು ತಮ್ಮ ಸ್ವಂತ ಪ್ರತಿಭೆಯಿಯ ಮೂಲಕ ಯಶಸ್ಸನ್ನು ಸಾಧಿಸಬೇಕು. ಜೊತೆಗೆ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದರೆ ಸಮಾಜ ಮುಂದುವರೆಯಲು ಸಾಧ್ಯವಾಗುತ್ತದೆ. ಆದ್ದರಿಂದಪ್ರತಿಯೊಬ್ಬರುಜಕಣಾಚಾರಿಯವರು ಹಾಕಿಕೊಟ್ಟಂತಹ ಮಾರ್ಗದಲ್ಲಿ ನಡೆದು ಅವರ ಆದರ್ಶ ಹಾಗೂ ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕೆಂದು ತಿಳಿಸಿದರು.

ಇದೇ ವೇಳೆ ನಿವೃತ್ತ ಮುಖ್ಯಶಿಕ್ಷಕ ಅನಂತಶಯನ ಬಡಿಗೇರ ಅವರು ಉಪನ್ಯಾಸ ನೀಡಿ ಮಾತನಾಡಿ, ಪ್ರಾಚೀನ ಕಾಲದಿಂದಲೂ ಕಲೆಗೆ ಹೆಸರುವಾಸಿಯಾದವರು ಹಾಗೂ ಪ್ರತಿಯೊಂದು ಲೋಹಕ್ಕೂ ಜೀವವಿದೆ ಎಂದು ತಿಳಿಸಿಕೊಟ್ಟವರು ವಿಶ್ವಕರ್ಮರು. ನಿರ್ಜೀವ ಮರ ಅಥವಾ ಲೋಹಗಳಿಗೆ ರೂಪ ನೀಡಿ ಅವುಗಳಿಗೆ ಮರುಜೀವ ನೀಡಿದ ಸಮಾಜವೆಂದರೆ ಅದು ವಿಶ್ವಕರ್ಮ ಸಮಾಜ ಮಾತ್ರ ವಾಗಿದೆ. ಜಕಣಾಚಾರಿಯವರು ತಮ್ಮ ಅದ್ಭುತ ಶಿಲ್ಪಗಳ ಮೂಲಕ ನಾಡನ್ನು ಸುಂದರವಾದ ನಾಡನ್ನಾಗಿಸಿದರು ಎಂದು ತಿಳಿಸಿದರು.

ಇದೇ ವೇಳೆ ಪಂಚ ಲೋಹಗಳಲ್ಲಿ ಸಾಧನೆ ಮಾಡಿದ ಸಾಧಕ ಶಿಲ್ಪಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಜೊತೆಗೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಕಾಳಪ್ಪ ಬಡಿಗೇರ ಅವರಿಗೆ ವಿಶೇಷ ಸನ್ಮಾನ ಮಾಡಲಾಯಿತು.

ಕಾರ್ಯಕ್ರಮಕ್ಕೂ ಮೊದಲು ನಗರದ ವಿಶ್ವಕರ್ಮ ವೃತ್ತದಿಂದ ಕನ್ನಡಭವನದ ವರೆಗೆ ವಿಶ್ವಕರ್ಮ ಜಕಣಾಚಾರಿ ಅವರ ಭಾವಚಿತ್ರವನ್ನು ಮೆರವಣಿಗೆ ಮಾಡಲಾಯಿತು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯತ್ ಅಧ್ಯಕ್ಷೆ ಜಯಮ್ಮ, ಸಹಾಯಕ ಆಯುಕ್ತೆ ಮಹಿಬೂಬಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಮಂಗಳಾ ನಾಯಕ, ವಿಶ್ವಕರ್ಮ ಸಮಾಜದ ಅಜ್ಜೇಂದ್ರ ಸ್ವಾಮೀಜಿ, ಬ್ರಹ್ಮಗಣೇಶ, ಮಾರುತಿ ಬಡಿಗೇರ, ಗಿರೀಶ್ ಆಚಾರ್ಯ, ವೆಂಕಟೇಶ, ಈರಣ್ಣ, ಮನೋಹರ್ ಬಡಿಗೇರ, ರವೀಂದ್ರ, ಕೆ.ರಾಮು ಗಾಣದಾಳ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಕಾಯಕ ಶ್ರದ್ಧೆ ಅಳವಡಿಸಿಕೊಳ್ಳಬೇಕು

**ತಹಶೀಲ್ದಾರ ವಿಠ್ಠಲ್ ಚೌಗಲಾ ಹೇಳಿಕೆ | ಕೊಪ್ಪಳದಲ್ಲಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ**



■ ಹಂಪಿ ಟೈಮ್ಸ್ ಕೊಪ್ಪಳ

ಅಮರ ಶಿಲ್ಪಿ ಎಂದೇ ಖ್ಯಾತರಾದ ಜಕಣಾಚಾರಿ ಅವರು ತನ್ಮಯತೆ ಹಾಗೂ ಶ್ರದ್ಧೆಯಿಂದ ತಮ್ಮ ಕಾಯಕದಲ್ಲಿ ತೊಡಗುತ್ತಿದ್ದರು. ಅವರ ಕಾಯಕ ಶ್ರದ್ಧೆಯನ್ನು ಇಂದು ನಾವೆಲ್ಲರೂ ಅಳವಡಿಸಿಕೊಳ್ಳಬೇಕಿದೆ ಎಂದು ತಹಶೀಲ್ದಾರ ವಿಠ್ಠಲ್ ಚೌಗಲಾ ಹೇಳಿದರು.

ನಗರದ ಸಾಹಿತ್ಯ ಭವನದಲ್ಲಿ ಸೋಮವಾರದಂದು ಜಿಲ್ಲಾಡಳಿತದಿಂದ ಆಯೋಜಿಸಲಾಗಿದ್ದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಅನೇಕ ಪುಸ್ತಕ ಹಾಗೂ ಇತಿಹಾಸದ ಮೂಲಕ ನಾವು ಜಕಣಾಚಾರಿಯವರ ಜೀವನ ಚರಿತ್ರೆಯನ್ನು ತಿಳಿದಿದ್ದೇವೆ. ಆದರೆ ಅವರ ಕಾಯಕ ನಿಷ್ಠೆಯನ್ನು ಇಂದಿಗೂ ನಾವು ಬೇಲೂರು, ಸೋಮನಾಥ ದೇವಾಲಯ, ಹಳೇಬೀಡು ಗಳಲ್ಲಿ ನೋಡಬಹುದು. ಪೂರ್ಣ ಶ್ರದ್ಧೆ ಮತ್ತು ತನ್ಮಯತೆಯಿಂದ ಮಾತ್ರ ಅಂತಹ ಶಿಲ್ಪಗಳನ್ನು ರಚಿಸಲು ಸಾಧ್ಯ. ಆದ್ದರಿಂದ ಇಂದು ನಾವು ಅವರಕಾಯಕನಿಷ್ಠೆಯನ್ನುಅಳವಡಿಸಿಕೊಳ್ಳಬೇಕಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಆಗಮಿಸಿದ್ದ ಹನುಮಸಾಗರದ ಪ್ರೌಢಶಾಲಾ ಶಿಕ್ಷಕರಾದ ರಾಮಚಂದ್ರ ಬಡಿಗೇರ್ ಅವರು ಮಾತನಾಡಿ, ಇಡೀ ಜಗತ್ತಿಗೆ ಅದ್ಭುತ ಶಿಲ್ಪಕಲೆಯನ್ನು ಪರಿಚಯಿಸಿದವರು ಅಮರಶಿಲ್ಪಿ ಜಕಣಾಚಾರಿಯವರು. 11ನೇ ಶತಮಾನದ ಅವರ ಶಿಲ್ಪಕಲೆಯನ್ನು ಇಂದಿಗೂ ಸರಿಗಟ್ಟಲು ಅಥವಾ ಹೋಲಿಕೆ ಮಾಡಲು ಸಾಧ್ಯವಿಲ್ಲ. ವಿಶ್ವಕರ್ಮ ಸಮುದಾಯಕ್ಕೆ ಕಿರೀಟಪ್ರಾಯರಾಗಿರುವ ಜಕಣಾಚಾರಿಯವರು ತಮ್ಮ ಕಲೆ, ಶ್ರದ್ಧೆಯನ್ನು ನಂಬಿ ಬದುಕಿದವರು. ಅವರ ಪ್ರಸಿದ್ಧ ಶಿಲ್ಪಕಲೆಗಳಲ್ಲಿಯೂ ಸಹ ಅವರ ಹೆಸರನ್ನು ನಮೂದಿಸಿಲ್ಲ. ಅಷ್ಟು ದೊಡ್ಡ ಸಾಧಕರಾಗಿಯೂ ಹೆಸರು, ಪ್ರಸಿದ್ಧಿಗೆ ಆಸೆ ಪಡದೆ ನಿಸ್ವಾರ್ಥದಿಂದ ತಮ್ಮ ಕಲೆಯನ್ನು ವ್ಯಕ್ತಪಡಿಸುವುದರಲ್ಲಿಯೇ ಜೀವನದ ಸಾರ್ಥಕ್ಯವನ್ನು ಕಂಡುಕೊಂಡರು. ಅವರ ಸಮುದಾಯದವರು ಕೂಡ ಶಿಕ್ಷಣಕ್ಕೆ ಆದ್ಯತೆ ನೀಡುವುದರ ಜೊತೆಗೆ ಅವರ ಕುಲಕಸುಬುಗಳನ್ನು ಮುಂದುವರೆಸಿಕೊಂಡು ಹೋಗಬೇಕು. ಪ್ರಾಚೀನ ಕುಲಕಸುಬುಗಳಿಗೆ ಆಧುನಿಕ ತಂತ್ರಜ್ಞಾನದ ಸಹಾಯದಿಂದ ಹೊಸ ರೂಪ ಕೊಟ್ಟು ಕಲೆ, ಸಂಸ್ಕೃತಿಯನ್ನು ಉಳಿಸಿಕೊಳ್ಳಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೊಟ್ರೇಶ್ ಮರಬನಳ್ಳಿ, ಸಿರಸಪ್ಪಯ್ಯನಮಠದ ಶೇಷಪ್ಪಯ್ಯ ಮಹಾಸ್ವಾಮಿ, ಗಿಣಿಗೇರಿಯ ಸುಬ್ಬಣ್ಣಾಚಾರ್ಯ, ನರಸಿಂಹ ದಿವಾಕರ ಮಹಾಸ್ವಾಮಿ, ಶ್ರೀಕಂಠಸ್ವಾಮಿ, ಸಮುದಾಯದ ಜಿಲ್ಲಾಧ್ಯಕ್ಷರಾದ ಈಶಪ್ಪ ಬಡಿಗೇರ, ಗೌರವಾಧ್ಯಕ್ಷರಾದ ಶೇಖರಪ್ಪ ಬಡಿಗೇರ, ತಾಲ್ಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ದೇವಪ್ಪ ಬಡಿಗೇರ, ವಿಶ್ವಕರ್ಮ ಅಭಿವೃದ್ಧಿ ನಿಗಮ, ಕೊಪ್ಪಳದ ಪ್ರಭಾಕರ ಬಡಿಗೇರ, ಮಾಜಿ ಜಿಲ್ಲಾಧ್ಯಕ್ಷರಾದ ಅಶೋಕ ವೇದಪಾಠಕ, ಲಕ್ಷ್ಮೀಶ ಬಡಿಗೇರ್ ಸೇರಿದಂತೆ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

# ಕನಕದುರ್ಗಮ್ಮ ದೇವಸ್ಥಾನದ ಹುಂಡಿಯಲ್ಲಿ 63.49 ಲಕ್ಷ ರೂ. ಸಂಗ್ರಹ

■ ಹಂಪಿ ಟೈಮ್ಸ್ ಬಳ್ಳಾರಿ

ನಗರದ ಶ್ರೀ ಕನಕ ದುರ್ಗಮ್ಮ ದೇವಸ್ಥಾನದ ಹುಂಡಿ ಹಣ ಎಣಿಕೆ ಕಾರ್ಯ ಶುಕ್ರವಾರ ನಡೆಸಲಾಯಿತು.

2023 ಆ.16 ರಿಂದ ಡಿ.29 ರ ವರೆಗೆ ಅಳವಡಿಸಲಾಗಿದ್ದ ದೇವಸ್ಥಾನದ 4 ನಾಲ್ಕು ಹುಂಡಿಗಳ ಎಣಿಕೆ ಕಾರ್ಯ ದೇವಸ್ಥಾನದ ಪ್ರಾಂಗಣದಲ್ಲಿ ನಡೆಯಿತು. ಹುಂಡಿ ಎಣಿಕೆ ವೇಳೆ ರೂ.63,49,235 ಹಣ ಸಂಗ್ರಹವಾಗಿದೆ.

ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಆಯುಕ್ತರಾದ ಹೆಚ್. ಗಂಗಾಧರ, ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಹನುಮಂತಪ್ಪ, ದೇವಸ್ಥಾನದ ಪ್ರಧಾನ ಧರ್ಮಕರ್ತರಾದ ಪಿ.ಎಂ.ರಾಜಶೇಖರ್, ಪಾರ್ವತಿ ನಗರದ ಕೆಜಿಬಿ ಬ್ಯಾಂಕ್‌ನ ವ್ಯವಸ್ಥಾಪಕರಾದ ರಾಮಲಿಂಗಪ್ಪ ಹಾಗೂ ಗಾಂಧಿನಗರ ಪೊಲೀಸ್ ಠಾಣೆಯ ಅರಕ್ಷಕ ಪ್ರವೀಣ್ ಕುಮಾರ್ ಅವರ ನೇತೃತ್ವದಲ್ಲಿ ಕನಕದುರ್ಗಮ್ಮ ದೇವಸ್ಥಾನದ ಹುಂಡಿ ಹಣ ಎಣಿಕೆ ಮಾಡಲಾಯಿತು.

# ಸಂಭಾವ್ಯ ಸಾಲ ಯೋಜನೆ 2024–25ರ ಪಟ್ಟಿ ಬಿಡುಗಡೆ




■ ಹಂಪಿ ಟೈಮ್ಸ್ ಬಳ್ಳಾರಿ

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಸಮನ್ವಯ ಸಮಿತಿ ಸಭೆಯಲ್ಲಿ 2024–25ನೇ ಸಾಲಿನ ಸಂಭಾವ್ಯ ಸಾಲ ಯೋಜನೆಯನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಶನಿವಾರ ಬಿಡುಗಡೆಗೊಳಿಸಿದರು.

ನಬಾರ್ಡ್ ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕ ಆರ್.ಎಸ್.ಯುವರಾಜ ಕುಮಾರ್ ಮಾತನಾಡಿ, ಬೆಳೆ ಸಾಲಕ್ಕಾಗಿ 2551.58 ಕೋಟಿ ರೂ., ಕೃಷಿ ದೀರ್ಘಾವಧಿ ಸಾಲಕ್ಕೆ 1038.79 ಕೋಟಿ ರೂ., ಕೃಷಿ ಮೂಲಸೌಕರ್ಯಕ್ಕಾಗಿ 75.78 ಕೋಟಿ ರೂ., ಕೃಷಿ ಪೂರಕ ಚಟುವಟಿಕೆಗಳಿಗೆ 250.18 ಕೋಟಿ ರೂ., ಒಟ್ಟಾಗಿ ಕೃಷಿ ಕ್ಷೇತ್ರಕ್ಕೆ 3916.33 ಕೋಟಿ ರೂ., ನಷ್ಟು 2024–25 ವರ್ಷಕ್ಕೆ ನಿಗದಿಪಡಿಸಲಾಗಿದೆ ಎಂದು ತಿಳಿಸಿದರು.

ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮಗಳಿಗೆ 2661.38 ಕೋಟಿ ರೂ., ರಫ್ತುಗೆ 25.60 ಕೋಟಿ ರೂ., ಶಿಕ್ಷಣಕ್ಕೆ 56.70 ಕೋಟಿ ರೂ., ವಸತಿ ಸೌಕರ್ಯಕ್ಕೆ 119.60 ಕೋಟಿ .. ನವೀಕರಿಸಬಹುದಾದ ಶಕ್ತಿಗೆ 3.04 ಕೋಟಿ ರೂ., ಮತ್ತು ಸಾಮಾಜಿಕ ಮೂಲಸೌಕರ್ಯಕ್ಕೆ 13.47 ಕೋಟಿ ರೂ., ಇತರೆ ಚಟುವಟಿಕೆಗಳಿಗೆ 95.70 ಕೋಟಿ ರೂ., ಯನ್ನು ನಿಗದಿಪಡಿಸಲಾಗಿದೆ. ಒಟ್ಟಾರೆ ಆದ್ಯತಾ ವಲಯಕ್ಕೆ 6891.82 ಕೋಟಿ ರೂ., ನಿಗದಿಪಡಿಸಲಾಗಿದೆ ಎಂದರು.

ಆರ್‌ಬಿಐನ ಎಲ್ ಡಿಒಎಂ. ಪಾಠಕ್, ಸೋಮನಗೌಡ ಐನಾಪುರ, ವಿವಿಧ ಬ್ಯಾಂಕ್ ಗಳ ಅಧಿಕಾರಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಮುಂತಾದವರು ಭಾಗವಹಿಸಿದ್ದರು.

# ಇಂದು ಕೊಪ್ಪಳ ವಿವಿ ವಾಣಿಜ್ಯ ವಿಭಾಗದಲ್ಲಿ ಕೌನ್ಸೆಲಿಂಗ್

■ ಹಂಪಿ ಟೈಮ್ಸ್ ಕೊಪ್ಪಳ

2023–24ನೇ ಶೈಕ್ಷಣಿಕ ಸಾಲಿನ ಕೊಪ್ಪಳ ವಿಶ್ವವಿದ್ಯಾಲಯದ ಎಂ.ಕಾಂ. ಸ್ನಾತಕೋತ್ತರ ಪದವಿಯ ಎಸ್‌ಎಸ್‌ಎಸ್ (ಸೆಲ್ಫ್ ಸಪೋರ್ಟ್ ಸ್ಕೀಮ್) ಪೇಮೆಂಟ್ ಹಾಗೂ ಸೂಪರ್ ನ್ಯೂಮರರಿ ಕೋಟಾದಡಿಯಲ್ಲಿ ಪ್ರವೇಶ ಬಯಸುವವರು 2024ರ ಜನವರಿ 02ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಕೊಪ್ಪಳ ವಿಶ್ವವಿದ್ಯಾಲಯ ಮುಖ್ಯ ಆವರಣ (04ನೇ ಮಹಡಿ, ಸರ್ಕಾರಿ ತಾಂತ್ರಿಕ ಮಹಾವಿದ್ಯಾಲಯದ ಆವರಣ, ತಳಕಲ್)ದ ವಾಣಿಜ್ಯ ವಿಭಾಗದಲ್ಲಿ ಕೌನ್ಸೆಲಿಂಗ್ ನಡೆಯಲಿದ್ದು, ಆಸಕ್ತ ವಿದ್ಯಾರ್ಥಿಗಳು ಸದರಿ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಈ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾಲಯದ ಜಾಲತಾಣ (www.koppaluniversity.ac.in)ದಲ್ಲಿ ನೋಡಬಹುದಾಗಿದೆ ಎಂದು ಕೊಪ್ಪಳ ವಿಶ್ವವಿದ್ಯಾಲಯದ ಕುಲ ಸಚಿವರು ತಿಳಿಸಿದ್ದಾರೆ.

ನೀವು ಜಾಹೀರಾತು ನೀಡಬೇಕೆಂದು ಬಯಸುತ್ತೀದ್ದೀರಾ? ನಿಮ್ಮ ಜಾಹೀರಾತುಗಳನ್ನು ವಾಟ್ಸ್‌ಪ್ ನಂಬರ್ 9448633038 ಗೆ ಅಥವಾ hampitimes@gmail.com ಗೆ ಕಳುಹಿಸಿರಿ

**IN THE COURT OF THE HON'BLE CIVIL JUDGE AND J.M.F.C. AT KUDLIGI**
**Crl. Misc. No. 1352/2023**

Between:
1. G.Marakka D/O Late G.H.Marappa late Rajappa aged about 70 years, 2. Jayamma W/O Doddasiddappa aged about 66 years,
3. Kuri Marappa S/O late G.H.Marappa aged about 65 years, 4. Sannadoddappa S/O Late G. H.Marappa aged about 60 years,
5. Doddamma W/O Late Ajjappa aged about 58 years,
All are Hindu, Agriculturist, residing at Suladahalli village in Kudligi Taluk, Vijayanagra District. …Petitioner And
The Tahasildar Kudligi
2 G Doodappa S/O H.Marappa … Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased petitioner's and Respondent No.2 Mother by name Gollara Kenchamma wife of late Hotte Marappa was died on 14/06/1999 Suladahalli village in Kudligi Taluk, Vijayanagra District on the file of the civil Judge& JMFC at kudligi, the Tahasildar Kudligi is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 04/01/2024 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 05/12/2023

By Order of the court
Chief Ministerial officer
Civil Judge and J.M.F.C Kudligi
Sri. Narappa, Advocate, Kudligi

**IN THE COURT OF THE HON'BLE CIVIL JUDGE AND J.M.F.C. AT KUDLIGI**
**Crl. Misc. No. 1334/2023**

Between:
1. G.Hiriyamma W/o Late Rajappa aged about 56 years,
2. G.Doddappa S/o Late G.Marappa aged about 40 years,
3.Marappa S/o Late G.Marappa aged about 38 years,
4. Halappa S/o Late G.Marappa aged about 34 years,
All are Hindu, Agriculturist, residing at Suladahalli village in Kudligi Taluk, Vijayanagra District. …Petitioner And
The Tahasildar Kudligi … Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased petitioner's no.1 Husband and petitioner No.2 to 4Uncle by name Gollara Ramjappa son of Late Gollara Doddappa was died on 16/03/2013 Suladahalli village in Kudligi Taluk, Vijayanagra District on the file of the civil Judge& JMFC at kudligi, the Tahasildar Kudligi is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 18/01/2024 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 04/12/2023

By Order of the court
Chief Ministerial officer
Civil Judge and J.M.F.C Kudligi
Sri. Narappa, Advocate, Kudligi

**IN THE COURT OF THE HON'BLE CIVIL JUDGE AND J.M.F.C. AT KUDLIGI**
**Crl. Misc. No. 1351/2023**

Between: 1. G.Marakka D/O Late G.H.Marappa late Rajappa aged about 70 years, 2. Jayamma W/O Doddasiddappa aged about 66 years, 3. Kuri Marappa S/O late G.H.Marappa aged about 65 years, 4. Sannadoddappa S/O Late G. H.Marappa aged about 60 years, 5. Doddamma W/O Late Ajjappa aged about 58 years,
All are Hindu, Agriculturist, residing at Suladahalli village in Kudligi Taluk, Vijayanagra District. …Petitioner And
The Tahasildar Kudligi
2) Doodappa S/O G.H.Marappa
.. Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased petitioner's and Respondent No.2 Grand Mother by name Gollara Sannabalamma wife of late Late Hotte Bharamappa was died on 18/04/1943 Suladahalli village in Kudligi Taluk, Vijayanagra District on the file of the civil Judge& JMFC at kudligi, the Tahasildar Kudligi is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 04/01/2024 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 05/12/2023

By Order of the court
Chief Ministerial officer
Civil Judge and J.M.F.C Kudligi
Sri. Narappa, Advocate, Kudligi

**INTHE COURT OF THE CIVIL JUDGE AND J.M.F.C. AT KUDLIGI.**
**Crl. Misc. No. 1353/2023**

Between: 1. G.Marakka D/O Late G.H.Marappa late Rajappa aged about 70 years, 2. Jayamma W/O Doddasiddappa aged about 66 years, 3. Kuri Marappa S/O late G.H.Marappa aged about 65 years, 4. Sannadoddappa S/O Late G. H.Marappa aged about 60 years, 5.Doddamma W/O Late Ajjappa aged about 58 years, 6.G.Hiriyamma W/O Late Rajappa aged about 56 years, 7. G.Doddappa S/O Late G.Marappa aged about 40 years, 8. Marappa S/O Late G.Marappa aged about 38 years, 9.Halappa S/O Late G.Marappa aged about 34 years,
All are Hindu, Agriculturist, residing at Suladahalli village in Kudligi Taluk, Vijayanagra District. … Petitioner And
The Tahasildar Kudligi … Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased petitioner's no.1 uncle and petitioner No'2's to 4 Grand Father by name Gollara Sanna Doddappa Son of Gollara Dodda @ Ramappa was died on 19/03/2013 Suladahalli village in Kudligi Taluk, Vijayanagra District on the file of the civil Judge& JMFC at kudligi, the Tahasildar Kudligi is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 04/01/2024 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 04/12/2023

By Order of the court
Chief Ministerial officer
Civil Judge and J.M.F.C Kudligi
Sri. Narappa, Advocate, Kudligi

**INTHE COURT OF THE CIVIL JUDGE AND J.M.F.C. AT KUDLIGI.**
**Crl. Misc. No. 1363/2023**

Between: 1 G.Marakka D/O Late G.H.Marappa late Rajappa aged about 70 years, 2. Jayamma W/O Doddasiddappa aged about 66 years, 3. Kuri Marappa S/O late G.H.Marappa aged about 65 years, 4. Sannadoddappa S/O Late G. H.Marappa aged about 60 years, 5.Doddamma W/O Late Ajjappa aged about 58 years, 6. G. Hiriyamma W/O Late Rajappa aged about 56 years, 7. G.Doddappa S/O Late G.Marappa aged about 40 years, 8.Marappa S/O Late G. Marappa aged about 38 years, 9. Halappa S/O Late G.Marappa aged about 34 years,
All are Hindu, Agriculturist, residing at Suladahalli village in Kudligi Taluk, Vijayanagra District. … Petitioner And
The Tahasildar Kudligi … Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased petitioner's and Respondent no'2 great grandfather by name Gollara Sannamarappa Son of Chikkappa was died on 20/07/1977 Suladahalli village in Kudligi Taluk, Vijayanagra District on the file of the civil Judge& JMFC at kudligi, the Tahasildar Kudligi is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 06/01/2024 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 04/12/2023

By Order of the court
Chief Ministerial officer
Civil Judge and J.M.F.C Kudligi
Sri. Narappa, Advocate, Kudligi

**INTHE COURT OF THE CIVIL JUDGE AND J.M.F.C. AT KUDLIGI.**
**Crl. Misc. No. 1364/2023**

Between: 1.G.Marakka D/O Late G.H.Marappa late Rajappa aged about 70 years, 2.Jayamma W/O Doddasiddappa aged about 66 years, 3.Kuri Marappa S/O late G.H.Marappa aged about 65 years, 4 Sannadoddappa S/O Late G. H.Marappa aged about 60 years, 5. Doddamma W/O Late Ajjappa aged about 58 years, 6.G.Hiriyamma W/O Late Rajappa aged about 56 years, 7. G. Doddappa S/O Late G.Marappa aged about 40 years, 8.Marappa S/O Late G.Marappa aged about 38 years, 9.Halappa S/o Late G.Marappa aged about 34 years,
All are Hindu, Agriculturist, residing at Suladahalli village in Kudligi Taluk, Vijayanagra District. …Petitioner And
The Tahasildar Kudligi … Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased petitioner's and respondent no'2 grate grandmother by name Gollara Kenchamma wife of Late Gollara Sannamarappa was died on 19/05/1925 Suladahalli village in Kudligi Taluk, Vijayanagra District on the file of the civil Judge& JMFC at kudligi, the Tahasildar Kudligi is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 06/01/2024 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 04/12/2023

By Order of the court
Chief Ministerial officer
Civil Judge and J.M.F.C Kudligi
Sri. Narappa, Advocate, Kudligi




ಮೈಕ್ರೋ ನ್ಯೂಸ್

## ಜ.3ರಂದು ಬಳ್ಳಾರಿಯಲ್ಲಿ ಗ್ರಾಹಕರ ಕುಂದು ಕೊರತೆ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಜೆಸ್ಕಾಂ ಬಳ್ಳಾರಿ ಕಾರ್ಯ ಮತ್ತು ಪಾಲನೆ ವಲಯದ ಮುಖ್ಯ ಅಭಿಯಂತರರ ಅಧ್ಯಕ್ಷತೆಯಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಹೆಚ್.ಟಿ ಮತ್ತು ಇ.ಹೆಚ್.ಟಿ ಗ್ರಾಹಕರುಗಳ ಕುಂದು ಕೊರತೆ ಸಭೆಯನ್ನು ಜನವರಿ 3ರಂದು ಬೆಳಿಗ್ಗೆ 11 ಗಂಟೆಗೆ ಬಳ್ಳಾರಿ ವಲಯ ಕಚೇರಿಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ವಿಜಯನಗರ ಜಿಲ್ಲೆಯ ಎಲ್ಲಾ ಹೆಚ್.ಟಿ ಮತ್ತು ಇ.ಹೆಚ್.ಟಿ ಗ್ರಾಹಕರು ಈ ಸಭೆಗೆ ಹಾಜರಾಗಿ ತಮ್ಮ ಅಹವಾಲುಗಳನ್ನು ಸಲ್ಲಿಸಬಹುದಾಗಿದೆ ಎಂದು ಜೆಸ್ಕಾಂ ಹೊಸಪೇಟೆ ಕಾರ್ಯ ಮತ್ತು ಪಾಲನೆಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹೆಚ್.ಟಿ & ಇ.ಹೆಚ್.ಟಿ ಗ್ರಾಹಕರ ಕುಂದು ಕೊರತೆ ಸಭೆಜ.3ಕ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**

ಜೆಸ್ಕಾಂ ಬಳ್ಳಾರಿ ಕಾರ್ಯ ಮತ್ತು ಪಾಲನೆ ವಲಯದ ಮುಖ್ಯ ಅಭಿಯಂತರರ ಅಧ್ಯಕ್ಷತೆಯಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಹೆಚ್.ಟಿ ಮತ್ತು ಇ.ಹೆಚ್.ಟಿ ಗ್ರಾಹಕರುಗಳ ಕುಂದು ಕೊರತೆ ಸಭೆಯನ್ನು ಜನವರಿ 3ರಂದು ಬೆಳಿಗ್ಗೆ 11 ಗಂಟೆಗೆ ಬಳ್ಳಾರಿ ವಲಯ ಕಚೇರಿಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ವಿಜಯನಗರ ಜಿಲ್ಲೆಯ ಎಲ್ಲಾ ಹೆಚ್.ಟಿ ಮತ್ತು ಇ.ಹೆಚ್.ಟಿ ಗ್ರಾಹಕರು ಈ ಸಭೆಗೆ ಹಾಜರಾಗಿ ತಮ್ಮ ಅಹವಾಲುಗಳನ್ನು ಸಲ್ಲಿಸಬಹುದಾಗಿದೆ ಎಂದು ಜೆಸ್ಕಾಂ ನಗರ ಉಪ ವಿಭಾಗದ–1 ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

## ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಆಯ್ಕೆಗಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳಿಗೆ ಏಕಗವಾಕ್ಷಿ ಯೋಜನೆಯಡಿಯಲ್ಲಿ 2023ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ವಿವಿಧ ವಿಷಯಗಳನ್ನೊಳಗೊಂಡ ಪುಸ್ತಕಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಆಯ್ಕೆಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಸಾಹಿತ್ಯ, ಕಲೆ, ವಿಜ್ಞಾನ, ಸರ್ಧಾತ್ಮಕ, ಪಠ್ಯ ಮತ್ತು ಸಾಂದರ್ಭಿಕ, ಮಕ್ಕಳ ಸಾಹಿತ್ಯ ಹಾಗೂ ಇತರೆ ವಿಷಯಗಳ ಕನ್ನಡ, ಆಂಗ್ಲ ಮತ್ತು ಭಾರತೀಯ ಭಾಷೆಗಳ ಗ್ರಂಥಗಳ ಆಯ್ಕೆಗಾಗಿ ಲೇಖಕರು, ಲೇಖಕ–ಪ್ರಕಾಶಕರು, ಪ್ರಕಾಶಕರು/ಸಂಸ್ಥೆಗಳಿಂದ ಪುಸ್ತಕಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಆಯ್ಕೆಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. 2023ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾದ ಪುಸ್ತಕಗಳನ್ನು ಬೆಂಗಳೂರಿನ ಕಬ್ಬನ್ ಉದ್ಯಾನವನದಲ್ಲಿರುವ ರಾಜ್ಯ ಕೇಂದ್ರ ಗ್ರಂಥಾಲಯದ ಗ್ರಂಥಸ್ವಾಮ್ಯ ವಿಭಾಗದಲ್ಲಿ ಜನವರಿ 31 ರೊಳಗಾಗಿ ಕಾಫಿರೈಟ್ ಮಾಡಿಸಿರುವ ಪುಸ್ತಕಗಳನ್ನು ಆಯ್ಕೆಗಾಗಿ, ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನು (ನೋಂದಣಿ ಪತ್ರದ ಪ್ರತಿಯೊಂದಿಗೆ) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು 560001 ಇಲ್ಲಿಗೆ ಸಲ್ಲಿಸಬೇಕು.

ತದನಂತರ ಬಂದ ಯಾವುದೇ ಪುಸ್ತಕಗಳನ್ನು ಸ್ವೀಕರಿಸಲಾಗುವುದಿಲ್ಲ. ನಿಗಧಿತ ಅರ್ಜಿ ನಮೂನೆ ಮತ್ತು ನಿಬಂಧನೆಗಳ ಮಾಹಿತಿಗಾಗಿ ಇಲಾಖಾ ಅಂತರ್ಜಾಲ www.dpl.karnataka.gov.in ಹಾಗೂ ಬಳ್ಳಾರಿ ಜಿಲ್ಲಾ ನಗರ ಕೇಂದ್ರ ಗ್ರಂಥಾಲಯದಲ್ಲಿ ಪಡೆಯಬಹುದು.

ಹೆಚ್ಚಿನ ಮಾಹಿತಿಗಾಗಿ ನಗರ ಕೇಂದ್ರ ಗ್ರಂಥಾಲಯದ ಕಚೇರಿಯ ದೂ.08392–274113 ಗೆ ಸಂಪರ್ಕಿಸಬಹುದು ಎಂದು ನಗರ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿಯವರು ತಿಳಿಸಿದ್ದಾರೆ.

# ಶಿಲ್ಪ ಪರಂಪರೆಯಲ್ಲಿ ಜಕಣಚಾರಿ ಅಮರ

**ನಿವೃತ್ತ ಉಪನ್ಯಾಸಕ ನಾಗರಾಜ ಪತ್ತಾರ ಹೇಳಿಕೆ। ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ**



**ಹಂಪಿ ಟೈಮ್ಸ್ ಹೊಸಪೇಟೆ**

ಶಿಲ್ಪಕಲೆ ನಮ್ಮ ದೇಶದ ಸಂಸ್ಕೃತಿ ಹಾಗೂ ಹೆಮ್ಮೆಯಾಗಿದ್ದು, ಶಿಲ್ಪಕಲೆಗೆ ಅಮರಶಿಲ್ಪಿ ಜಕಣಾಚಾರಿ ಅವರ ಕೊಡುಗೆ ಅಪಾರವಾಗಿದೆ ಎಂದು ನಿವೃತ್ತ ಉಪನ್ಯಾಸಕ ನಾಗರಾಜ ಪತ್ತಾರ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹೊಸಪೇಟೆ ನಗರಸಭೆ ಸಹಯೋಗದಲ್ಲಿ ಸೋಮವಾರ ನಗರದ ಬಳ್ಳಾರಿ ರಸ್ತೆಯ ಕಾಳಿಕಮ್ಮ ದೇವಸ್ಥಾನದಲ್ಲಿ ಆಯೋಜಿಸಲಾದ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಅವರು ಮಾತನಾಡಿದರು.

ಶಿಲ್ಪಿಗಳು ದೇಶ ಹಾಗೂ ಈ ನಾಡಿನ ಸಾಂಸ್ಕೃತಿ, ರಾಜಕೀಯ, ಶೈಕ್ಷಣಿಕ ಮೂಲ ಪರಂಪರೆಗಳನ್ನು ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಸೆರೆಹಿಡಿದಿಟ್ಟದ್ದಾರೆ. ಅಂತಹ ಶಿಲ್ಪಿಗಳಲ್ಲಿ ಅಮರಶಿಲ್ಪಿ ಜಕಣಾಚಾರಿ ಯವರು ಪ್ರಮುಖರಾಗಿದ್ದಾರೆ.ಜಕಣಾಚಾರಿ ಅವರು ಒಬ್ಬ ಐತಿಹಾಸಿಕ ವ್ಯಕ್ತಿಯಾಗಿದ್ದಾರೆ. ಹಲವಾರು ರಾಜಮನೆತನಗಳು ಆಳ್ವಿಕೆಯ ಪ್ರತಿಫಲವಾಗಿ ಶಿಲ್ಪ ಪರಂಪರೆಯಲ್ಲಿ ಕರ್ನಾಟಕವು ವಿಶ್ವವಿಖ್ಯಾತಿಯಾಗಿದೆ. ಹಳೇಬೀಡಿನಲ್ಲಿರು ಹೊಯ್ಸಳೇಶ್ವರ ಹಾಗೂ ಬೇಲೂರಿನಚನ್ನಕೇಶ ್ವರದೇವಾಲಯಗಳು, ವಿಜಯನಗರ ಸಾಮ್ರಾಜ್ಯದ ಹಂಪಿ ಹಾಗೂ ರಾಜ್ಯದ ಇತರ ಐತಿಹಾಸಿಕ ಸ್ಥಳಗಳು ಜಗತ್ ಪ್ರಸಿದ್ಧವಾಗಿದ್ದು, ಕರುನಾಡಿನ ಶಿಲ್ಪಗಳ ವೈಭವವನ್ನು ನೋಡಲು ವಿಶ್ವದಾದ್ಯಂತ ಎಲ್ಲಾ ಪ್ರವಾಸಿಗರು ಭೇಟಿ ನೀಡಿ, ನಮ್ಮ ಸಂಸ್ಕೃತಿಯನ್ನು ಕೊಂಡಾಡುತ್ತಿದ್ದಾರೆ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ತಹಶೀಲ್ದಾರ್ ವಿಶ್ವಜಿತ್ ಮೆಹ್ತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ ರಂಗಣ್ಣವರ,ಜಿಲ್ಲಾಧಿಕಾರಿಗಳ ಕಾರ್ಯಾಲಯದ ತಹಶೀಲ್ದಾರ್ ಷಣ್ಮುಖ ಹಾಗೂ ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಅಮರೇಶ ಗುಡ್ಡದಲ್ಲಿ ಸ್ವಚ್ಚತೆ ಕಾರ್ಯ ಶ್ರಮದಿಂದ ಹೊಸ ವರ್ಷ ಆಚರಣೆ

**ಕೊಟ್ಟೂರು "ಯುನಿಕ್ ಚಾರಿಟಬಲ್ ಟ್ರಸ್ಟ್" ಸದಸ್ಯರ ಕಾರ್ಯಕ್ಕೆ ಎಲ್ಲೆಡೆ ಮೆಚ್ಚುಗೆ**

**ಬಂದಾತರ ಪ್ರಕಾಶ್**
**ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ "ಯುನಿಕ್ ಚಾರಿಟಬಲ್ ಟ್ರಸ್ಟ್" ಸದಸ್ಯರು ಹೊಸ ವರ್ಷದ ಪ್ರಯುಕ್ತ ಮೋಜು ಮಸ್ತು ಮಾಡದೆ ಜಿಲ್ಲೆಯ,ಕೂಡ್ಲಿಗಿ ತಾಲೂಕು ಎ.ಡಿ.ಗುಡ್ಡದ ಅಮರೇಶ್ವರ ಬೆಟ್ಟದಲ್ಲಿ ಸ್ವಚ್ಚತಾ ಕಾರ್ಯ ಕೈಗೊಂಡು, ಹೊಸ ವರ್ಷದ ಆಚರಣೆಗೆ ಅರ್ಥ ಕಲ್ಪಿಸಿಕೊಟ್ಟಿದ್ದಾರೆ.

ಹೊಸ ವರ್ಷ ಆಚರಣೆ ಕೇವಲ ಮೋಜು ಮಸ್ತಿಗೆ ಸೀಮಿತ ಆಗಿರುವ ಪ್ರಸ್ತುತ ದಿನಗಳಲ್ಲಿ ಟ್ರಸ್ಟ್ ನ ಸರ್ವ ಸದಸ್ಯರ ಒಮ್ಮತದ ಅಭಿಪ್ರಾಯದ ಮೇರೆಗೆ ಡಿಸೆಂಬರ್ 31ರ ಮಧ್ಯಾಹ್ನ 3 ರಿಂದ ರಾತ್ರಿ ವರೆಗೆ ಅಮರೇಶ್ವರ ದೇವಸ್ಥಾನದ ಮೆಟ್ಟಿಲುಗಳು ಹಾಗೂ ಗುಡಿ ಆವರಣದಲ್ಲಿ ಸ್ವಚ್ಚತಾ ಸೇವಾ ಕಾರ್ಯ ಕೈಗೊಂಡು, ಶ್ರಮದಿಂದ ಈ ರೀತಿಯು ಹೊಸ ವರ್ಷವನ್ನು ಆಚರಿಸಿ,ಸಂಭ್ರಮಿಸಬಹುದು ಎಂಬುದಕ್ಕೆ ಸಾಕ್ಷಿಯಾಗಿದ್ದಾರೆ.

ಟ್ರಸ್ಟ್ ನ ಅಧ್ಯಕ್ಷ ಪಿ.ಎಂ ಈಶ್ವರ ಹೊಸ ವರ್ಷದ ಆಚರಣೆ ಹೆಸರಿನಲ್ಲಿ ಯುವಕರು ಮೋಜು ಮಸ್ತಿ ಮಾಡಿ, ತಮ್ಮ ಬಂಗಾರದಂತ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿರುವುದನ್ನು ಕಣ್ಣಾರೆ ಕಂಡಿದ್ದೇವೆ.

ಈ ಹಿನ್ನೆಲೆ 2024 ರ ಹೊಸ ವರ್ಷದ ಆಚರಣೆ ವಿಭಿನ್ನವಾಗಿ ಆಚರಿಸಬೇಕು,ಉಳಿದವರಿಗೆ ಮಾದರಿ





ಆಗಿರಬೇಕು ಎಂಬ ಟ್ರಸ್ಟ್ ನ ಸದಸ್ಯರ ಚಿಂತನೆಯಂತೆ, ಒಂದುದಿನ ಮುಂಚೆಯೇ ಸಮಾಜ ಸೇವೆ ಕಾರ್ಯಕೈಗೊಳ್ಳುವ ಮೂಲಕ ಹಳೆಯ ವರ್ಷ 2023 ರನ್ನು ಬೀಳ್ಕೊಟ್ಟು 2024 ಹೊಸ ವರ್ಷವನ್ನು ಸ್ವಾಗತಿಸಿದ್ದೇವೆ ಎಂದು ಮಾಹಿತಿ ನೀಡಿದರು.

ಹಾಗೆ ಜನವರಿ–3ಕ್ಕೆ ಅಮರೇಶ್ವರ ಗಡ್ಡದ 3 ಅಮರೇಶ್ವರ ಸ್ವಾಮಿ ಕಾರ್ತಿಕೋತ್ಸವ ಇದ್ದು, ಸಕಲ ಭಕ್ತಾದಿಗಳು ಶ್ರೀಸ್ವಾಮಿಯ ಕಾರ್ತಿಕೋತ್ಸವಕ್ಕೆ ಆಗಮಿಸಿ ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಹಾಗೆ ಇಲ್ಲಿನ ಪ್ರಕೃತಿಯ ಪರಿಸರವನ್ನು ಸ್ವೀಕರಿಸಬೇಕೆಂದು ತಿಳಿಸಿದರು.

ಸ್ವಚ್ಛತೆಯಲ್ಲಿ ಟ್ರಸ್ಟ್ ಸದಸ್ಯರಾದ ಪಿ.ಕೊಟ್ರೇಶ್, ಅನಿಲ್ ಕುಮಾರ್ ಕೆ,ಪ್ರಸಾದ್ ಅಂಗಡಿ,ಬಸವರಾಜ, ಎಂ. ಮಂಜುನಾಥ, ಗಂಗಾವತಿ ಪ್ರಸನ್ನ ಸಂಪನ್ನ, ಶಿಕ್ಷಕ ವಿಜಯ್ ಹನಸಿ, ಹಾಗೂ ಮಂಜುನಾಥ ಎಂ. ಹಾಗೂ ಶಿಕ್ಷಕ ಅರವಿಂದ್ ಜಂಬೂರ್, ಗುರುಬಸವರಾಜ ಹಾಗೂ ಸ್ಥಳೀಯ ಯುವಕರಾದ ಅಶೋಕ್, ಸಚಿನ್ ಮತ್ತು ಅಲ್ಲಿನ ಯುವಕರ ತಂಡ, ನಮ್ಮೊಂದಿಗೆ ದೇವಸ್ಥಾನ ಆವರಣ ಗುಡಿ ಸ್ವಚ್ಛತೆ ಸೇವಾ ಶ್ರಮದಾನ ಕಾರ್ಯದಲ್ಲಿ ಪಾಲ್ಗೊಂಡಿದ್ದರು ಎಂದು ಮಾಹಿತಿ ನೀಡಿದರು.

ಹಂಪಿ ಟೈಮ್ಸ್
ಸುದ್ದಿ
ಜಾಹೀರಾತಿಗಾಗಿ
ಸಂಪರ್ಕಿಸಿ
9448633038

# ಅಂತರ ಮಹಾವಿದ್ಯಾಲಯಗಳ ಕರಾಟೆ ಪಂದ್ಯಾವಳಿಗೆ ಸುಜನ್,ಅಭಿಷೇಕ್ ಆಯ್ಕೆ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ:**





ಹೂವಿನ ಹಡಗಲಿಯ ಶ್ರೀಮತಿ ರುದ್ರಾಂಬ ಎಂ.ಪಿ.ಪ್ರಕಾಶ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಹಾಗೂ ಬಳ್ಳಾರಿ ವಿಜಯನಗರ ಶ್ರೀಕೃಷ್ಣ ದೇವರಾಯ ವಿಶ್ವವಿದ್ಯಾಲಯ ಆಶ್ರಯದಲ್ಲಿ ಅಂತರ ಮಹಾವಿದ್ಯಾಲಯಗಳ ಪುರುಷ ಮತ್ತು ಮಹಿಳೆಯರ ಕರಾಟೆ ಪಂದ್ಯಾವಳಿಗಳಲ್ಲಿ ಇಲ್ಲಿಯ ಟ್ರೆಡಿಷನಲ್ ಶೂಟಕಾನ್ ಕರಾಟೆ ಆಕಾಡಮಿಯ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ಕರ್ಮಯೋಗ ಟ್ರಸ್ಟ್‌ನ ಸಂಸ್ಥಾಪಕ ಸುಭಾಷ್‌ಚಂದ್ರ ತಿಳಿಸಿದರು. ಅವರು ಪಟ್ಟಣದಲ್ಲಿ ಮಾತನಾಡಿ, ಹೂವಿನ ಹಡಗಲಿಯಲ್ಲಿ ಇತ್ತೀಚಿಗೆ ನಡೆದ ಆಯ್ಕೆ ಸ್ಪರ್ಧೆಯಲ್ಲಿ 75ರಿಂದ 80ಕೆ.ಜಿ.ತೂಕದ ವಿಭಾಗದಲ್ಲಿ ಬಿ.ಸುಜನ್ ಹಾಗೂ 46ರಿಂದ 50ಕೆ.ಜಿ. ತೂಕದ ಕ್ಯಟಗರಿಯಲ್ಲಿ ಎಂ.ವಿ.ಅಭಿಷೇಕ್ ಇವಬ್ಬರು ಪ್ರಥಮ ಸ್ಥಾನ ಪಡೆಯುವ ಮೂಲಕ ಆಯ್ಕೆಯಾಗಿದ್ದಾರೆ. ಆ. 15ರಂದು ಭೂಪಾಲ್ (ಮಧ್ಯಪ್ರದೇಶ)ದಲ್ಲಿ ನಡೆಯುವ ಕರಾಟೆ ಪಂದ್ಯಾವಳಿಯಲ್ಲಿ ಇವರು ಪಾಲ್ಗೊಳ್ಳಲಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

# ವೈಯಕ್ತಿಕ ಶೌಚಾಲಯ ನಿರ್ಮಾಣ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕುರುಗೋಡು ಪುರಸಭೆ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ್ ಮಿಷನ್ ಯೋಜನೆ(ನಗರ) 2.0 ಯೋಜನೆಯಡಿಯಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಾಣ ಮಾಡಿಕೊಳ್ಳಲು ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಕುರುಗೋಡು ಪುರಸಭೆ ಮುಖ್ಯಾಧಿಕಾರಿ ಕೆ.ದುರುಗಣ್ಣ ಅವರು ತಿಳಿಸಿದ್ದಾರೆ.

2023–24ನೇ ಸಾಲಿನಲ್ಲಿ ಕುರುಗೋಡು ಪುರಸಭೆಗೆ ಒಟ್ಟು 66 ವೈಯಕ್ತಿಕ ಶೌಚಾಲಯ ಗುರಿ ನಿಗಧಿಪಡಿಸಿದ್ದು, ವೈಯಕ್ತಿ ಶೌಚಾಲಯಗಳನ್ನು ಹೊಂದದೇ ಇರುವ ಮತ್ತು ಈ ಹಿಂದೆ ವೈಯಕ್ತಿಕ ಶೌಚಾಲಯಕ್ಕೆ ಪುರಸಭೆಯಿಂದ ಯಾವುದೇ ಅನುದಾನ ಪಡೆಯದೇ ಇರುವ ಫಲಾನುಭವಿಗಳು ತಮ್ಮ ಸ್ವಂತ ಜಾಗದಲ್ಲಿ ಶೌಚಾಲಯ ನಿರ್ಮಿಸಿಕೊಳ್ಳಲು ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಿದೆ.

ಅರ್ಜಿಗಳನ್ನು ಜ.06ರೊಳಗಾಗಿ ಕಚೇರಿ ಸಮಯದಲ್ಲಿ ಪುರಸಭೆ ಕಾರ್ಯಾಲಯಕ್ಕೆ ಸಲ್ಲಿಸಬೇಕು. ಅವಧಿ ಮೀರಿ ಬಂದಂತಹ ಅರ್ಜಿಗಳನ್ನು ಪರಿಗಣಿಸುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕುರುಗೋಡು ಪುರಸಭೆ ಕಾರ್ಯಾಲಯ ಕಚೇರಿ ಅಥವಾ ದೂ.08393–263166ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA